# ಕನ್ನಡ ಪೋಸ್ಟ್

ಸಂಪಾದಕ : ಮಂಜು ಬನವಾಸೆ

KANNADA POST

ಇದು ಸುದ್ದಿ ವಿಳಾಸ

ಕನ್ನಡ ದಿನಪತ್ರಿಕೆ

ಹಾಸನ | E-mail : kannadapostnews@gmail.com | / ಕನ್ನಡ post | Price: ₹1

Vol.No.02 | Issue. 228 | Pages. 2 | Date: 20-08-2026, THURSDAY | RNI NO: KARKAN/2024/89601 | Kannada Daily

ಸಂಪುಟ : 02 - ಸಂಚಿಕೆ : 228 - ಪುಟಗಳು : 2 | 20-08-2026 | ಗುರುವಾರ | Ph: 8762954248 | ದರ : ₹1


# 20 ವರ್ಷದಿಂದ ಈ ಊರಲ್ಲಿ ನೆಟ್‌ವರ್ಕ್ ಇಲ್ಲ

## ತುರ್ತು ಸಂದರ್ಭದಲ್ಲೂ ಸಂಪರ್ಕ ಅಸಾಧ್ಯ | ವಿದ್ಯಾರ್ಥಿಗಳಿಗೂ ತೊಂದರೆ

**ಕನ್ನಡ ಪೋಸ್ಟ್ ನ್ಯೂಸ್ ನೆಟ್ವರ್ಕ್**

ಸಕಲೇಶಪುರ: ತಾಲೂಕಿನ ಗಡಿಭಾಗದ ಬ್ಯಾದನೆ ಗ್ರಾಮದಲ್ಲಿ ಸುಮಾರು 20 ವರ್ಷಗಳಿಂದ ಸಮರ್ಪಕ ಮೊಬೈಲ್ ನೆಟ್ ವರ್ಕ್ ಸಂಪರ್ಕವಿಲ್ಲದೆ ಸುಮಾರು 150 ಕುಟುಂಬಗಳ 600ಕ್ಕೂ ಹೆಚ್ಚು ಮಂದಿ ತೀವ್ರ ತೊಂದರೆ ಅನುಭವಿಸುತ್ತಿದ್ದಾರೆ. ನೆಟ್‌ವರ್ಕ್ ಪಡೆಯಲು ಗ್ರಾಮಸ್ಥರು ಒಂದರಿಂದ ಎರಡು ಕಿ.ಮೀ. ದೂರ ತೆರಳಬೇಕಾದ ಅನಿವಾರ್ಯ ಪರಿಸ್ಥಿತಿ ನಿರ್ಮಾಣವಾಗಿದೆ.




ಗ್ರಾಮದಲ್ಲಿ ಮೊಬೈಲ್ ಸಂಪರ್ಕದ ಕೊರತೆಯಿಂದ ತುರ್ತು ಸಂದರ್ಭಗಳಲ್ಲಿ ದೂರವಾಣಿ ಕರೆ ಮಾಡಲು ಸಾಧ್ಯವಾಗದೆ ಜನರು ಪರದಾಡುವಂತಾಗಿದೆ. ಅದರಲ್ಲೂ ಇತ್ತೀಚಿನ ವರ್ಷಗಳಲ್ಲಿ ಗ್ರಾಮ ಹಾಗೂ ಸುತ್ತಮುತ್ತಲಿನ ಪ್ರದೇಶಗಳಲ್ಲಿ ಕಾಡಾನೆಗಳ ಹಾವಳಿ ಹೆಚ್ಚಾಗಿದ್ದು, ಆನೆಗಳ ಸಂಚಾರ ಅಥವಾ ದಾಳಿ ಕುರಿತು ಅರಣ್ಯ ಇಲಾಖೆ ಹಾಗೂ ಸಂಬಂಧಪಟ್ಟ ಅಧಿಕಾರಿಗಳಿಗೆ ತಕ್ಷಣ ಮಾಹಿತಿ ನೀಡಲು ಸಾಧ್ಯವಾಗದೆ ಗ್ರಾಮಸ್ಥರು ಆತಂಕ ಎದುರಿಸುತ್ತಿದ್ದಾರೆ.

### ವಿದ್ಯಾರ್ಥಿಗಳಿಗೂ ಸಂಕಷ್ಟ

ನೆಟ್‌ವರ್ಕ್ ಸಮಸ್ಯೆಯಿಂದ ವಿದ್ಯಾರ್ಥಿಗಳ ಶಿಕ್ಷಣಕ್ಕೂ ತೀವ್ರ ಹೊಡೆತ ಬಿದ್ದಿದೆ. ಕಾಲೇಜು ಸೇರಿದಂತೆ ವಿವಿಧ ಶಿಕ್ಷಣ ಸಂಸ್ಥೆಗಳಲ್ಲಿ ವ್ಯಾಸಂಗ ಮಾಡುತ್ತಿರುವ ವಿದ್ಯಾರ್ಥಿಗಳು ಆನ್‌ಲೈನ್ ತರಗತಿಗಳು, ಶೈಕ್ಷಣಿಕ ಮಾಹಿತಿ ಹಾಗೂ ಇತರ ಅಗತ್ಯ ಸೇವೆಗಳನ್ನು ಪಡೆಯಲು ನೆಟ್ ವರ್ಕ್ ಸಿಗುವ ಪ್ರದೇಶಗಳಿಗೆ ತೆರಳಬೇಕಾಗಿದೆ. ಇದರಿಂದ ವಿದ್ಯಾರ್ಥಿಗಳ ಅಮೂಲ್ಯ ಸಮಯ ವ್ಯರ್ಥವಾಗುತ್ತಿದೆ ಎಂದು ಗ್ರಾಮಸ್ಥರು ತಿಳಿಸಿದ್ದಾರೆ.

### ತುರ್ತು ಸೇವೆಗೂ ಸಂಪರ್ಕವಿಲ್ಲ

ಗ್ರಾಮದಲ್ಲಿ ಆರೋಗ್ಯ ಸಮಸ್ಯೆ, ಕಾಡಾನೆ ದಾಳಿ ಅಥವಾ ಇತರ ಯಾವುದೇ ತುರ್ತು ಪರಿಸ್ಥಿತಿ ಎದುರಾದಾಗ ಕೂಡಲೇ ದೂರವಾಣಿ ಮೂಲಕ ನೆರವು ಪಡೆಯಲು ಸಾಧ್ಯವಾಗದಿರುವುದು ಗ್ರಾಮಸ್ಥರ ಆತಂಕಕ್ಕೆ ಕಾರಣವಾಗಿದೆ. ಅಂಬುಲೆನ್ಸ್, ಪೊಲೀಸ್, ಅರಣ್ಯ ಇಲಾಖೆ ಸೇರಿದಂತೆ ಸಂಬಂಧಪಟ್ಟ ಇಲಾಖೆಗಳೊಂದಿಗೆ ತಕ್ಷಣ ಸಂಪರ್ಕ ಸಾಧಿಸಲು ಸಾಧ್ಯವಾಗದೆ ತುರ್ತು ಸಂದರ್ಭದಲ್ಲಿ ಜನರು ಪರದಾಡುವಂತಾಗಿದೆ.

### ಶಾಶ್ವತ ಪರಿಹಾರಕ್ಕೆ ಆಗ್ರಹ

ಕಳೆದ ಎರಡು ದಶಕಗಳಿಂದ ಮುಂದುವರಿದಿರುವ ನೆಟ್‌ವರ್ಕ್ ಸಮಸ್ಯೆಗೆ ಇನ್ನಾದರೂ ಶಾಶ್ವತ ಪರಿಹಾರ ಕಲ್ಪಿಸಬೇಕು ಎಂದು ಗ್ರಾಮಸ್ಥರು ಒತ್ತಾಯಿಸಿದ್ದಾರೆ. ಬ್ಯಾದನೆ ಗ್ರಾಮದಲ್ಲಿ ಮೊಬೈಲ್ ಟವರ್ ಸ್ಥಾಪಿಸುವುದು ಅಥವಾ ಪರ್ಯಾಯ ನೆಟ್ ವರ್ಕ್ ವ್ಯವಸ್ಥೆ ಕಲ್ಪಿಸುವ ಮೂಲಕ ಸಮರ್ಪಕ ಸಂಪರ್ಕ ಒದಗಿಸಬೇಕು. ವಿದ್ಯಾರ್ಥಿಗಳು, ರೈತರು ಹಾಗೂ ಗ್ರಾಮಸ್ಥರು ಎದುರಿಸುತ್ತಿರುವ ಸಮಸ್ಯೆಯನ್ನು ಅಧಿಕಾರಿಗಳು ಗಂಭೀರವಾಗಿ ಪರಿಗಣಿಸಿ ಶೀಘ್ರ ಪರಿಹಾರ ಕಲ್ಪಿಸಬೇಕು ಎಂದು ಮನವಿ ಮಾಡಿದ್ದಾರೆ.

# ಶಾಸಕ ಅರಗ ಜ್ಞಾನೇಂದ್ರ ಮೂಲಕ ಸರ್ಕಾರಕ್ಕೆ ಮನವಿ

**ಕನ್ನಡ ಪೋಸ್ಟ್ ನ್ಯೂಸ್ ನೆಟ್ವರ್ಕ್**

ಹಾಸನ: ಕೇಂದ್ರ ಸರ್ಕಾರದ ಮಾದರಿಯಲ್ಲಿ ರಾಜ್ಯದಲ್ಲೂ ಕೋಳಿ ಬೆಳೆಗಾರರಿಗೆ ಕೃಷಿ ನೀತಿ ಜಾರಿಗೆ ತರಬೇಕೆಂದು ಶಾಸಕ ಅರಗ ಜ್ಞಾನೇಂದ್ರ ಅವರು ಸರ್ಕಾರಕ್ಕೆ ಒತ್ತಾಯಿಸಿದ್ದಾರೆ.

ಬೆಂಗಳೂರಿನ ವಿಧಾನಸೌಧದಲ್ಲಿ ಕೋಳಿ ಬೆಳಗಾರರೊಂದಿಗೆ ಮಾತನಾಡಿದ ಅವರು, ಕಳೆದ 25 ವರ್ಷಗಳಿಂದ ಕಂಪನಿಗಳು ರೈತರಿಗೆ ಶೋಷಣೆ ಮಾಡುತ್ತಿವೆ. ರಾಜ್ಯದ ಹಲವು ಜಿಲ್ಲೆಗಳಲ್ಲಿ ಪ್ರೋತ್ಸಾಹ ಧನ ಸಮರ್ಪಕವಾಗಿ ತಲುಪುತ್ತಿಲ್ಲ. ಕೇಂದ್ರ ಸರ್ಕಾರದ ಬಹುನಿರೀಕ್ಷಿತ ಯೋಜನೆ ಕರ್ನಾಟಕದಲ್ಲಿ ಜಾರಿಯಾದರೆ ರಾಜ್ಯದ ಕೋಳಿ ಬೆಳಗಾರರಿಗೆ ಶಾಶ್ವತ ಪರಿಹಾರ ಸಿಗಲಿದೆ ಎಂದರು. ಈ ಬಗ್ಗೆ ಸದನದಲ್ಲಿ ಚರ್ಚಿಸಿ ಮುಖ್ಯಮಂತ್ರಿ ಡಿ.ಕೆ.ಶಿವಕುಮಾರ್ ಅವರ ಗಮನಕ್ಕೆ ತರಲಾಗುವುದು ಎಂದರು.



ರಾಜ್ಯ ಕೋಳಿ ಸಾಕಾಣಿಕೆದಾರರ ಸಂಘದ ರಾಜ್ಯಾಧ್ಯಕ್ಷ ಚಂದ್ರಶೇಖರ್, ಗೌರವಾಧ್ಯಕ್ಷ ಮಾರಣ್ಣ, ಕಾರ್ಯದರ್ಶಿ ಲಕ್ಷ್ಮಿಕಾಂತ್, ನಿರ್ದೇಶಕರಾದ ಮಾಲೂರ್ ಶ್ರೀಧರ್, ಮನ್ಮತ್ ಗೌಡ, ರಾಜ್ಯ ಪ್ರಧಾನ ಕಾರ್ಯದರ್ಶಿ ಶ್ರೀಧರೆಡ್ಡಿ, ಉಪಾಧ್ಯಕ್ಷ ಪ್ರಕಾಶ್ ರೆಡ್ಡಿ, ಹೊಸಕೋಟೆ ತಾಲ್ಲೂಕು ಅಧ್ಯಕ್ಷ ನಂಜುಂಡಯ್ಯ, ಸೂರಿ ಯಾದವ್ ರಮೇಶ್ ಇತರರು ಇದ್ದರು.

# ಮನೆ ಬೀಗ ಮುರಿದು ಚಿನ್ನಾಭರಣ ಕಳವು

**ಕನ್ನಡ ಪೋಸ್ಟ್ ನ್ಯೂಸ್ ನೆಟ್ವರ್ಕ್**

ಹಾಸನ: ಮನೆ ಕಿಟಕಿಯ ಗಾಜು ಒಡೆದು ಬಾಗಿಲು ತೆರೆದು ಒಳನುಗ್ಗಿರುವ ಕಳ್ಳರು ಅಂದಾಜು 26 ಗ್ರಾಂ ತೂಕದ ಚಿನ್ನಾಭರಣ ಕಳವು ಮಾಡಿರುವ ಘಟನೆ ವಿಜಯನಗರ ಬಡಾವಣೆಯಲ್ಲಿ ನಡೆದಿದೆ.

ಚೈತ್ರ ಎಂಬುವವರ ಮನೆಯಲ್ಲಿ ಮಂಗಳವಾರ ಕಳ್ಳತನವಾಗಿದೆ. ಮನೆಯಲ್ಲಿ ಯಾರೂ ಇಲ್ಲದಿರುವುದನ್ನು ಖಚಿತಪಡಿಸಿಕೊಂಡು ಹಾಡ ಹಗಲೇ ಬಂದಿರುವ ಕಳ್ಳರು ಕಿಟಕಿ ಗಾಜು ಒಡೆದು ಒಳಪ್ರವೇಶಿಸಿದ್ದಾರೆ. ಬೀರುವಿನಲ್ಲಿಟ್ಟಿದ್ದ 8 ಗ್ರಾಂ ನೆಕ್ಲೆಸ್, 12 ಗ್ರಾಂ ತೂಕದ ಒಂದು ಕತ್ತಿನ ಚಿನ್ನದ ಸರ, 2 ಗ್ರಾಂ ತೂಕದ ಎರಡು ಚಿನ್ನದ ಉಂಗುರ, 1 ಗ್ರಾಂ ತೂಕದ ಎರಡು ಚಿನ್ನದ ಉಂಗುರ ಕಳುವಾಗಿದೆ. ನಗರ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.

# ಅಗತ್ಯ ಸೌಕರ್ಯಕ್ಕಾಗಿ ವಿದ್ಯಾರ್ಥಿನಿಯರ ಪ್ರತಿಭಟನೆ

**ಕನ್ನಡ ಪೋಸ್ಟ್ ನ್ಯೂಸ್ ನೆಟ್ವರ್ಕ್**

ಹಾಸನ: ನಗರದ ಅಪೂರ್ವ ಬಿಲ್ಡಿಂಗ್‌ನಲ್ಲಿ ಸಮಾಜ ಕಲ್ಯಾಣ ಇಲಾಖೆಯ ಅಧೀನದಲ್ಲಿ ಕಾರ್ಯನಿರ್ವಹಿಸುತ್ತಿರುವ ಡಾ. ಬಿ.ಆರ್. ಅಂಬೇಡ್ಕರ್ ಬಾಲಕಿಯರ ವಿದ್ಯಾರ್ಥಿ ನಿಲಯದಲ್ಲಿ ಅಗತ್ಯ ಮೂಲಭೂತ ಸೌಲಭ್ಯಗಳನ್ನು ಕಲ್ಪಿಸುವಂತೆ ಆಗ್ರಹಿಸಿ ಎಐಡಿಎಸ್‌ಓ ನೇತೃತ್ವದಲ್ಲಿ ವಿದ್ಯಾರ್ಥಿನಿಯರು ಬುಧವಾರ ಪ್ರತಿಭಟನೆ ನಡೆಸಿದರು.




ನಗರದ ಸ್ಕೌಟ್ಸ್ ಅಂಡ್ ಗೈಡ್ಸ್ ಭವನದ ಪಕ್ಕದಲ್ಲಿರುವ ತಾಲೂಕು ಸಮಾಜ ಕಲ್ಯಾಣ ಇಲಾಖೆ ಕಚೇರಿ ಎದುರು ನಡೆದ ಪ್ರತಿಭಟನೆಗೆ ಅಧಿಕಾರಿಗಳು ಸ್ಪಂದಿಸಿ ಬೇಡಿಕೆಗಳನ್ನು ಈಡೇರಿಸುವ ಭರವಸೆ ನೀಡಿದರು.

ಎಐಡಿಎಸ್‌ಓ ಜಿಲ್ಲಾಧ್ಯಕ್ಷೆ ಚೈತ್ರಾ ಮಾತನಾಡಿ, ವಿದ್ಯಾರ್ಥಿ ನಿಲಯದಲ್ಲಿ ವಾಸಿಸುತ್ತಿರುವ ವಿದ್ಯಾರ್ಥಿನಿಯರಿಗೆ ಕಿಟಕಿ ಪರದೆ, ಸ್ಲಿಪ್ಪರ್ ಸ್ಟ್ಯಾಂಡ್, ಮ್ಯಾಟ್, ಬೆಡ್ ಹಾಗೂ ಕಾಟ್ ಸೇರಿದಂತೆ ಕನಿಷ್ಠ ಅಗತ್ಯ ಸೌಲಭ್ಯಗಳ ಕೊರತೆಯಿಂದ ತೀವ್ರ ತೊಂದರೆ ಅನುಭವಿಸುವಂತಾಗಿದೆ ಎಂದು ಆರೋಪಿಸಿದರು.

ಫ್ಯಾನ್ ವ್ಯವಸ್ಥೆ ಇಲ್ಲದಿರುವುದರ ಜೊತೆಗೆ ಕಿಟಕಿಗಳಿಗೆ ಪರದೆಗಳಿಲ್ಲ. ಅದರಿಂದ ವಿದ್ಯಾರ್ಥಿನಿಯರಿಗೆ ವೈಯಕ್ತಿಕ ಗೌಪ್ಯತೆಯ ಸಮಸ್ಯೆಯೂ ಎದುರಾಗಿದೆ. ಬಟ್ಟೆ ಬದಲಾಯಿಸುವ ಸಂದರ್ಭದಲ್ಲಿಯೂ ಬೆಡ್‌ಶೀಟ್‌ಗಳನ್ನು ಪರದೆಯಂತೆ ಬಳಸಬೇಕಾದ ಮುಜುಗರದ ಪರಿಸ್ಥಿತಿ ನಿರ್ಮಾಣವಾಗಿದೆ. ರಾತ್ರಿ ವೇಳೆ ಸೊಳ್ಳೆಗಳ ಕಾಟ ಹಾಗೂ ಉಸಿರುಗಟ್ಟುವ ವಾತಾವರಣದಿಂದ ವಿದ್ಯಾರ್ಥಿನಿಯರ ಆರೋಗ್ಯ, ಶಿಕ್ಷಣ ಮತ್ತು ಮಾನಸಿಕ ನೆಮ್ಮದಿಯ ಮೇಲೂ ಪರಿಣಾಮ ಬೀರುತ್ತಿದೆ ಎಂದು ಹೇಳಿದರು.

ಈ ಸಮಸ್ಯೆಗಳ ಕುರಿತು ವಿದ್ಯಾರ್ಥಿನಿಯರು ಹಾಸ್ಟೆಲ್ ವಾರ್ಡನ್ ಹಾಗೂ ಸಂಬಂಧಪಟ್ಟ ಅಧಿಕಾರಿಗಳಿಗೆ ಹಲವು ಬಾರಿ ಮೌಖಿಕವಾಗಿ ಮತ್ತು ಲಿಖಿತವಾಗಿ ಮನವಿ ಸಲ್ಲಿಸಿದ್ದರೂ ಶಾಶ್ವತ ಪರಿಹಾರ ದೊರೆತಿರಲಿಲ್ಲ. ಅಧಿಕಾರಿಗಳ ನಿರ್ಲಕ್ಷ್ಯವನ್ನು ಖಂಡಿಸಿ ವಿದ್ಯಾರ್ಥಿನಿಯರು ಎಐಡಿಎಸ್‌ಓ ನೇತೃತ್ವದಲ್ಲಿ ಹೋರಾಟ ನಡೆಸಬೇಕಾಯಿತು ಎಂದು ತಿಳಿಸಿದರು.

ಪ್ರತಿಭಟನೆ ಸ್ಥಳಕ್ಕೆ ಆಗಮಿಸಿದ ಸಮಾಜ ಕಲ್ಯಾಣ ಇಲಾಖೆಯ ಅಧಿಕಾರಿಗಳು ವಿದ್ಯಾರ್ಥಿನಿಯರ ಮನವಿ ಸ್ವೀಕರಿಸಿ ಸಮಸ್ಯೆಗಳನ್ನು ಆಲಿಸಿದರು. ಅಧಿಕಾರಿಗಳೊಂದಿಗೆ ನಡೆದ ಮಾತುಕತೆಯ ಬಳಿಕ ವಿದ್ಯಾರ್ಥಿಗಳ ಪ್ರಮುಖ ಬೇಡಿಕೆಗಳನ್ನು ನಿಗದಿತ ಅವಧಿಯಲ್ಲಿ ಈಡೇರಿಸುವುದಾಗಿ ಭರವಸೆ ನೀಡಲಾಯಿತು. ಒಂದು ವಾರದೊಳಗೆ ಕಿಟಕಿ ಪರದೆ, ಸ್ಲಿಪ್ಪರ್ ಸ್ಟ್ಯಾಂಡ್, ಮ್ಯಾಟ್ ಹಾಗೂ ಮಸ್ಕ್ಯುಟೊ ಕಾಯಿಲ್‌ಗಳನ್ನು ವಿದ್ಯಾರ್ಥಿನಿಲಯಕ್ಕೆ ಒದಗಿಸುವುದಾಗಿ ಅಧಿಕಾರಿಗಳು ತಿಳಿಸಿದರು. 110 ಪಿಯು ವಿದ್ಯಾರ್ಥಿನಿಯರು ಇರುವ ವಿದ್ಯಾರ್ಥಿನಿಲಯದಲ್ಲಿ 15 ದಿನಗಳೊಳಗೆ ಪ್ರತಿಯೊಬ್ಬ ವಿದ್ಯಾರ್ಥಿನಿಗೂ ಬೆಡ್ ವ್ಯವಸ್ಥೆ ಕಲ್ಪಿಸುವುದಾಗಿ ಭರವಸೆ ನೀಡಿದರು.

ವಿದ್ಯಾರ್ಥಿಗಳ ಒಗ್ಗಟ್ಟಿನ ಹೋರಾಟ ಮತ್ತು ಒತ್ತಡಕ್ಕೆ ಸ್ಪಂದಿಸಿ ಅಧಿಕಾರಿಗಳು ಬೇಡಿಕೆಗಳನ್ನು ಈಡೇರಿಸುವುದಾಗಿ ಭರವಸೆ ನೀಡಿರುವುದು ವಿದ್ಯಾರ್ಥಿಗಳ ಹೋರಾಟಕ್ಕೆ ಸಂದ ಜಯವಾಗಿದೆ ಎಂದು ಎಐಡಿಎಸ್‌ಓ ಹೇಳಿದೆ. ಸರ್ಕಾರಿ ವಿದ್ಯಾರ್ಥಿನಿಲಯಗಳಲ್ಲಿ ವಿದ್ಯಾರ್ಥಿಗಳ ಶಿಕ್ಷಣ, ಆರೋಗ್ಯ, ಸುರಕ್ಷತೆ ಹಾಗೂ ಗೌಪ್ಯತೆಗೆ ಅಗತ್ಯವಿರುವ ಎಲ್ಲ ಮೂಲಭೂತ ಸೌಲಭ್ಯಗಳನ್ನು ಸರ್ಕಾರ ಖಾತರಿಪಡಿಸಬೇಕು. ಅಧಿಕಾರಿಗಳು ನೀಡಿರುವ ಭರವಸೆಗಳನ್ನು ನಿಗದಿತ ಅವಧಿಯೊಳಗೆ ಜಾರಿಗೊಳಿಸಬೇಕು ಎಂದು ಸಂಘಟನೆ ಆಗ್ರಹಿಸಿದೆ.

ಪ್ರತಿಭಟನೆಯಲ್ಲಿ ಎಐಡಿಎಸ್‌ಓ ಜಿಲ್ಲಾ ಕಾರ್ಯದರ್ಶಿ ಸುಷ್ಮಾ, ಉಪಾಧ್ಯಕ್ಷ ಅಭಿಷೇಕ್ ಮತ್ತಿತರರಿದ್ದರು.

# ಸಚಿವ ಬಿ. ನಾಗೇಂದ್ರ ರಾಜೀನಾಮೆಗೆ ಬಿಜೆಪಿ ಒತ್ತಾಯ

**ಕನ್ನಡ ಪೋಸ್ಟ್ ನ್ಯೂಸ್ ನೆಟ್ವರ್ಕ್**

ಹಾಸನ: ಮಹರ್ಷಿ ವಾಲ್ಮೀಕಿ ಹಗರಣದ ಪ್ರಮುಖ ಆರೋಪಿ ಬಿ.ನಾಗೇಂದ್ರ ಅವರನ್ನು ಸಚಿವ ಸಂಪುಟದಿಂದ ಹೊರಗಿಡಬೇಕೆಂದು ಆಗ್ರಹಿಸಿ ಜಿಲ್ಲಾ ಬಿಜೆಪಿ ವತಿಯಿಂದ ಬುಧವಾರ ಜಿಲ್ಲಾಧಿಕಾರಿ ಕಚೇರಿ ಎದುರು ಪ್ರತಿಭಟನೆ ನಡೆಸಲಾಯಿತು.




ಬಿಜೆಪಿ ಜಿಲ್ಲಾಧ್ಯಕ್ಷ ಸಿದ್ದೇಶ್ ನಾಗೇಂದ್ರ ಮಾತನಾಡಿ, ವಾಲ್ಮೀಕಿ ನಿಗಮದ ಹಣ ಅಕ್ರಮ ವರ್ಗಾವಣೆ ಕೇವಲ ಹಣಕಾಸಿನ ಅವ್ಯವಹಾರದ ವಿಚಾರವಲ್ಲ. ಬಡವರು ಮತ್ತು ಹಿಂದುಳಿದ ಸಮುದಾಯಗಳ ಅಭಿವೃದ್ಧಿಗೆ ಮೀಸಲಾಗಿದ್ದ ಹಣವನ್ನು ದುರ್ಬಳಕೆ ಮಾಡಿರುವ ಆರೋಪವಾಗಿರುವುದರಿಂದ ಸರ್ಕಾರ ಗಂಭೀರವಾಗಿ ಪರಿಗಣಿಸಬೇಕೆಂದು ಒತ್ತಾಯಿಸಿದರು.

ವಾಲ್ಮೀಕಿ ಅಭಿವೃದ್ಧಿ ನಿಗಮದ ಹಣವನ್ನು ಅಕ್ರಮ ವರ್ಗಾವಣೆ ಮಾಡಿದ ಆರೋಪ ಎದುರಿಸುತ್ತಿದ್ದ ನಾಗೇಂದ್ರ ಅವರನ್ನು ಸಂಪುಟಕ್ಕೆ ಸೇರಿಸಿಕೊಳ್ಳುವ ಮೂಲಕ ಕಾಂಗ್ರೆಸ್ ಸರ್ಕಾರ ತಾನು ಭ್ರಷ್ಟಾಚಾರಿಗಳ ಪರ ಎಂಬುದನ್ನು ಸಾಬೀತುಪಡಿಸಿದೆ ಎಂದು ಆಕ್ರೋಶ ವ್ಯಕ್ತಪಡಿಸಿದರು.

ನಿಗಮದ ಹಣವನ್ನು ಬೇರೆ ರಾಜ್ಯಗಳ ಬ್ಯಾಂಕ್ ಖಾತೆಗಳಿಗೆ ವರ್ಗಾಯಿಸಲಾಗಿದೆ ಎಂಬ ಆರೋಪ ಕೇಳಿಬಂದಿವೆ. ವಿಶೇಷವಾಗಿ ತೆಲಂಗಾಣದ ವಿವಿಧ ಬ್ಯಾಂಕ್‌ಗಳಲ್ಲಿ ಹಣ ಇಡಲಾಗಿದೆ ಎಂಬ ಆರೋಪ ಕುರಿತು ಸಮಗ್ರ ತನಿಖೆ ನಡೆಯಬೇಕು. ಹಣದ ವರ್ಗಾವಣೆ, ಖಾತೆಗಳ ನಿರ್ವಹಣೆ ಹಾಗು ಅದರಲ್ಲಿ ಭಾಗಿಯಾಗಿರುವ ವ್ಯಕ್ತಿ ಮತ್ತು ಅಧಿಕಾರಿಗಳ ಪಾತ್ರವನ್ನು ತನಿಖಾ ಸಂಸ್ಥೆಗಳು ಬಹಿರಂಗಪಡಿಸಬೇಕೆಂದು ಆಗ್ರಹಿಸಿದರು.

ಹಣದ ಅಕ್ರಮ ವರ್ಗಾವಣೆ ಪ್ರಕರಣದಲ್ಲಿ ತನಿಖಾ ಸಂಸ್ಥೆಗಳು ಈಗಾಗಲೇ ಕ್ರಮ ಕೈಗೊಂಡಿದ್ದು, ಹಣವನ್ನು ವಶಪಡಿಸಿಕೊಂಡಿರುವ ವಿಚಾರವೂ ಸಾರ್ವಜನಿಕವಾಗಿ ಚರ್ಚೆಯಾಗಿದೆ. ಹೀಗಾಗಿ ಪ್ರಕರಣವನ್ನು ಯಾವುದೇ ರಾಜಕೀಯ ಒತ್ತಡವಿಲ್ಲದೆ ತನಿಖೆ ನಡೆಸಿ, ಅಕ್ರಮದ ಹಿಂದಿರುವ ಸಂಪೂರ್ಣ ಜಾಲ ಪತ್ತೆ ಹಚ್ಚಬೇಕು. ಅಲ್ಲಿವರೆಗೂ ನಾಗೇಂದ್ರ ರಾಜೀನಾಮೆ ನೀಡಬೇಕೆಂದು ಆಗ್ರಹಿಸಿದರು.

ಕಾಂಗ್ರೆಸ್ ಅಧಿಕಾರಕ್ಕೆ ಬಂದ ನಂತರ ಬಡವರು ಹಾಗು ಜನಸಾಮಾನ್ಯರಿಗೆ ಅನ್ಯಾಯವಾಗುತ್ತಿದೆ. ಸರ್ಕಾರದ ಆಡಳಿತದಲ್ಲಿ ಪಾರದರ್ಶಕತೆ ಮತ್ತು ಹೊಣೆಗಾರಿಕೆ ಇರಬೇಕು ಎಂದು ಹೇಳಿದರು. ಸಮಾಜದ ದುರ್ಬಲ ವರ್ಗಗಳ ಅಭಿವೃದ್ಧಿಗಾಗಿ ಮೀಸಲಿಟ್ಟ ಹಣವನ್ನು ಯಾವ ಕಾರಣಕ್ಕೂ ದುರ್ಬಳಕೆ ಮಾಡಬಾರದು. ಇಂತಹ ಪ್ರಕರಣ ಮರುಕಳಿಸದಂತೆ ಹಣಕಾಸು ನಿರ್ವಹಣೆಯಲ್ಲಿ ಕಟ್ಟುನಿಟ್ಟಿನ ನಿಯಮ ಜಾರಿಗೆ ತರಬೇಕು. ತಪ್ಪಿತಸ್ಥರು ಯಾರೇ ಆಗಿದ್ದರೂ ಕಾನೂನು ಕ್ರಮ ಜರುಗಿಸಬೇಕೆಂದು ಒತ್ತಾಯಿಸಿದರು.

ಭ್ರಷ್ಟಾಚಾರಕ್ಕೆ ಕಡಿವಾಣ ಹಾಕಿ, ಪಾರದರ್ಶಕ ಆಡಳಿತ ನೀಡಿ ಎಂದು ಘೋಷಣೆ ಕೂಗಿದ ಪ್ರತಿಭಟನಾಕಾರರು, ರಾಜ್ಯ ಸರ್ಕಾರ ಜನರ ಸಮಸ್ಯೆಗಳಿಗೆ ಸ್ಪಂದಿಸುವಲ್ಲಿ ವಿಫಲವಾಗಿದೆ ಎಂದು ದೂರಿದರು.

ಬಿಜೆಪಿ ಮಾಜಿ ಜಿಲ್ಲಾಧ್ಯಕ್ಷ ನವಿಲೆ ಅಣ್ಣಪ್ಪ, ಪ್ರಧಾನ ಕಾರ್ಯದರ್ಶಿಗಳಾದ ಅಮಿತ್ ಶೆಟ್ಟಿ, ರಾಜ್‌ಕುಮಾರ್, ಜಿಲ್ಲಾ ವಕ್ತಾರ ಆರ್.ಮೋಹನ್, ರೈತ ಮೋರ್ಚಾ ಜಿಲ್ಲಾಧ್ಯಕ್ಷ ಬಿ.ಹೆಚ್. ನಾರಾಯಣಗೌಡ, ವಕೀಲ ಶ್ರೀಕಾಂತ್ ಚೆನ್ನಂಗಿಹಳ್ಳಿ, ವೇದಾವತಿ, ಗಿರೀಶ್, ರಾಜೀವ್, ಮಹೇಶ್ ಮೊದಲಾದವರಿದ್ದರು. ಇದೇ ವೇಳೆ ಮಾಜಿ ಸಚಿವ ಬಿ.ಸಿ.ನಾಗೇಶ್ ಅವರ ನಿಧನಕ್ಕೆ ಸಂತಾಪ ಸೂಚಿಸಲಾಯಿತು.

# ಸೆ.12ರಂದು ಕರ್ವಾಲೋ ಕುರಿತು ರಾಜ್ಯ ಮಟ್ಟದ ರಸಪ್ರಶ್ನೆ ಸ್ಪರ್ಧೆ




**ಕನ್ನಡ ಪೋಸ್ಟ್ ನ್ಯೂಸ್ ನೆಟ್ವರ್ಕ್**

ಹಾಸನ: ಸಾಹಿತಿ ಕೆ.ಪಿ.ಪೂರ್ಣಚಂದ್ರ ತೇಜಸ್ವಿ ಅವರ ಜನಪ್ರಿಯ ಕೃತಿ ಕರ್ವಾಲೋ ಪ್ರಕಟಗೊಂಡು 46 ವರ್ಷ ಪೂರೈಸಿರುವ ಹಿನ್ನಲೆಯಲ್ಲಿ ನಗರದ ಅಬಚೂರಿನ ಮಿತ್ರವೃಂದ ವತಿಯಿಂದ ಸೆ.12 ರಂದು ರಾಜ್ಯಮಟ್ಟದ ರಸಪ್ರಶ್ನೆ ಸ್ಪರ್ಧೆ ಹಮ್ಮಿಕೊಳ್ಳಲಾಗಿದೆ.

ಮಹಾಲಕ್ಷ್ಮಿ ಬಡಾವಣೆಯ ಸ್ಕಾಲರ್ಸ್ ಇಂಟರ್ ನ್ಯಾಷನಲ್ ಶಾಲೆಯಲ್ಲಿ ಅಂದು ಬೆಳಿಗ್ಗೆ 9 ಗಂಟೆಗೆ ಸ್ಪರ್ಧೆ ಆರಂಭವಾಗಲಿದ್ದು, ಕೊಟ್ಟಿಗೆಹಾರದ ಕೆ.ಪಿ.ಪೂರ್ಣಚಂದ್ರ ತೇಜಸ್ವಿ ಪ್ರತಿಷ್ಠಾನ ಹಾಗು ಹಾಸನ ರೋಟರಿ ಕ್ವಾಂಟಾ ಸಂಸ್ಥೆಗಳು ಸಹಯೋಗ ನೀಡಿವೆ.

### ಎರಡು ವಿಭಾಗಗಳಲ್ಲಿ ಸ್ಪರ್ಧೆ

ಮುಕ್ತ ವಿಭಾಗ (ಕರ್ವಾಲೋ ಕ್ವಿಜ್): ಯಾವುದೇ ವಯೋಮಿತಿಯಿಲ್ಲದೆ ಎಲ್ಲಾ ಸಾಹಿತ್ಯಾಸಕ್ತರಿಗೂ ಮುಕ್ತ ಅವಕಾಶ. ಕರ್ವಾಲೋ ಕಾದಂಬರಿ ಆಧಾರಿತ ಪ್ರಶ್ನೆಗಳಿರುತ್ತವೆ. ಪ್ರಥಮ ಬಹುಮಾನ 10,000 ರೂ., ದ್ವಿತೀಯ 5,000 ರೂ. ಹಾಗೂ ತೃತೀಯ 3,000 ರೂ. ಬಹುಮಾನ ನಿಗದಿಪಡಿಸಲಾಗಿದೆ.

ಶಾಲಾ ಮಕ್ಕಳ ವಿಭಾಗ (ಪ್ರಕೃತಿ-ಪರಿಸರ): ಶಾಲಾ ವಿದ್ಯಾರ್ಥಿಗಳಲ್ಲಿ ಜೀವವೈವಿಧ್ಯ ಮತ್ತು ಪರಿಸರ ಜಾಗೃತಿ ಮೂಡಿಸುವ ಉದ್ದೇಶದಿಂದ ಪ್ರಕೃತಿ ವಿಷಯದ ರಸಪ್ರಶ್ನೆ ನಡೆಯಲಿದೆ. ಪ್ರಥಮ 5,000 ರೂ., ದ್ವಿತೀಯ 3,000 ರೂ. ಹಾಗೂ ತೃತೀಯ 1,500 ರೂ. ಬಹುಮಾನ ನೀಡಲಾಗುತ್ತದೆ. ಎರಡೂ ವಿಭಾಗಗಳಿಗೂ ಮೊದಲ ಸುತ್ತಿನಲ್ಲಿ ಲಿಖಿತ ಬಹು ಆಯ್ಕೆ ಪರೀಕ್ಷೆ ನಡೆಯಲಿದೆ. ಗರಿಷ್ಠ ಅಂಕ ಪಡೆದ 10 ಸ್ಪರ್ಧಿಗಳನ್ನು ಆಯ್ದು, ತಲಾ ಇಬ್ಬರಂತೆ 5 ತಂಡಗಳನ್ನು ರಚಿಸಿ ಅಂತಿಮ ಬಹುಹಂತದ ರಸಪ್ರಶ್ನೆ ನಡೆಸಲಾಗುತ್ತದೆ. ಸ್ಪರ್ಧೆಯ ವೇಳೆ ಮೊಬೈಲ್ ಬಳಕೆ ನಿಷೇಧಿಸಲಾಗಿದೆ.

ಪ್ರವೇಶ ಶುಲ್ಕ 100 ಆಗಿದ್ದು, ಪ್ರತಿ ವಿಭಾಗದಲ್ಲೂ ಮೊದಲು ನೋಂದಾಯಿಸಿದ 100 ಅಭ್ಯರ್ಥಿಗಳಿಗೆ ಮಾತ್ರ ಭಾಗವಹಿಸಲು ಅವಕಾಶವಿರುತ್ತದೆ.

ನೋಂದಣಿ ವಿವರ: ಮುಕ್ತ ವಿಭಾಗದ ನೋಂದಣಿಗೆ ಡಾ. ವಿನೋದ್ ಕುಮಾರ್ (7829449332) ಹಾಗೂ ಶಾಲಾ ವಿಭಾಗದ ನೋಂದಣಿಗೆ ತಾರಾ (8129045993) ಅವರನ್ನು ಸಂಪರ್ಕಿಸಬಹುದು.

# ಕನ್ನಡ ಸಾಹಿತ್ಯಕ್ಕೆ ಗೊರೂರು ರಾಮಸ್ವಾಮಿ ಅಯ್ಯಂಗಾರ್ ಕೊಡುಗೆ ಅಪಾರ

**ಕನ್ನಡ ಪೋಸ್ಟ್ ನ್ಯೂಸ್ ನೆಟ್ವರ್ಕ್**

ಹಾಸನ: ಗೊರೂರು ರಾಮಸ್ವಾಮಿ ಅಯ್ಯಂಗಾರ್ ಅವರು ನೂರಾರು ಕೃತಿಗಳ ಮೂಲಕ ಶ್ರೇಷ್ಠ ಲೇಖಕ ಎನಿಸಿಕೊಂಡಿದ್ದಾರಾದರೂ ಅದಕ್ಕಿಂತ ಹೆಚ್ಚಾಗಿ ಅವರು ಸ್ವಾತಂತ್ರ್ಯ ಹೋರಾಟಗಾರ, ಗಾಂಧೀಜಿ ಅನುಯಾಯಿ ಆಗಿದ್ದರು ಎಂದು ಸಾಹಿತಿ ಕೆ.ಸತ್ಯನಾರಾಯಣ ಹೇಳಿದರು.



ಬೆಂಗಳೂರಿನ ಅಜೀಂ ಪ್ರೇಮ್ ಜಿ ವಿಶ್ವವಿದ್ಯಾಲಯ, ಹಾಸನ ವಿಶ್ವವಿದ್ಯಾಲಯ ವತಿಯಿಂದ ನಗರದ ಹಾಸನಾಂಬ ಕಲಾಕ್ಷೇತ್ರದಲ್ಲಿ ಬುಧವಾರ ಏರ್ಪಡಿಸಿದ್ದ ಆಧುನಿಕ ಕನ್ನಡ ಸಾಹಿತ್ಯ ಸಂವೇದನೆ-ಸಾಹಿತ್ಯ ಸಹವಾಸ ಸಾಹಿತ್ಯಕ ಕಾರ್ಯಕ್ರಮ ಸರಣಿಯಲ್ಲಿ ಮಾತನಾಡಿದರು.

ಗೊರೂರು ರಾಮಸ್ವಾಮಿ ಅಯ್ಯಂಗಾರ್ ಹಾಗೂ ಬಾನು ಮುಷ್ತಾಕ್ ಅವರು ಹಾಸ್ಯದ ಮೂಲಕ ಓದುಗರನ್ನು ಸೆಳೆದರೆ ಎಸ್.ಎಲ್.ಭೈರಪ್ಪನವರು ಆಧ್ಯಾತ್ಮಿಕ ತಳಹದಿಯ ಮೇಲೆ ತಮ್ಮದೇಯಾದ ಓದುಗ ವರ್ಗವನ್ನು ಸೃಷ್ಟಿಸಿಕೊಂಡಿದ್ದಾರೆ. ಸಾಹಿತಿಗಳು ತಮ್ಮದೇಯಾದ ಚಿಂತನೆ, ಆಲೋಚನೆ ಹಾಗು ಶೈಲಿಯಿಂದ ಓದುಗರನ್ನು ಸೆಳೆಯುತ್ತಾರೆ. ಲೇಖಕರನ್ನು ಯಾವುದೇ ಒಂದು ಪಂಥಕ್ಕೆ ಸೀಮಿತಗೊಳಿಸದೆ ಬರವಣಿಗೆಯನ್ನಷ್ಟೇ ಪರಿಗಣಿಸಬೇಕೆಂದರು.

ಹುಟ್ಟೂರಿನ ಬಗ್ಗೆ ರಾಮಸ್ವಾಮಿ ಅಯ್ಯಂಗಾರ್ ಅವರಿಗೆ ಅಪಾರ ಪ್ರೀತಿ ಇತ್ತು. ಹೇಮಾವತಿ ನದಿ ಎಷ್ಟೇ ದೊಡ್ಡದಾಗಿರಬಹುದು ಆದರೆ ಗೊರೂರಿನಲ್ಲಿ ಹರಿಯುವಷ್ಟು ಚೆನ್ನಾಗಿ ಮತ್ತೆ ಎಲ್ಲಿಯೂ ಕಾಣುವುದಿಲ್ಲವೆನ್ನುವ ಮೂಲಕ ಅವರು ಹುಟ್ಟೂರಿನ ಅಭಿಮಾನ ಮೆರೆದಿದ್ದರು. ಅಮೇರಿಕಾದಲ್ಲಿದ್ದರೂ ಗೊರೂರು ಕುರಿತೇ ಯೋಚಿಸುತ್ತಿದ್ದರು. ಅಂತಹ ಮತ್ತೊಬ್ಬ ಲೇಖಕ ಆ ಊರಿನಲ್ಲಿ ಹುಟ್ಟಲಿಲ್ಲ ಎನ್ನುವುದು ವಿಷಾದದ ಸಂಗತಿ ಎಂದರು.

ಸಾಹಿತಿಯಾಗಿ ಕೇವಲ ಮನುಷ್ಯ ಕೇಂದ್ರಿತ ಪಾತ್ರಗಳನ್ನು ಸೃಷ್ಟಿಸದೆ ಪ್ರಾಣಿ, ಪ್ರಕೃತಿ ಸಮಾಜವನ್ನು ಪ್ರತಿನಿಧಿಸುತ್ತಿದ್ದರು. ಕಾದಂಬರಿಯಲ್ಲಿ ಅವರೂ ಒಬ್ಬ ಪಾತ್ರಧಾರಿಯಾಗಿ ಜೀವಿಸುತ್ತಿದ್ದರು. ಹೀಗಾಗಿ ಓದುಗರ ಮನ ಗೆದ್ದಿದ್ದಾರೆಂದರು.

ಮಹಾತ್ಮ ಗಾಂಧೀಜಿ ಅವರ ಅಪ್ಪಟ ಅಭಿಮಾನಿ ಆಗಿದ್ದ ಅಯ್ಯಂಗಾರ್ ಅವರು, ಅಸಹಕಾರ ಚಳವಳಿ, ಪಾನ ನಿರೋಧ, ಸ್ವದೇಶಿ ವಸ್ತು ಬಳಕೆಗೆ ಕರೆ ಹೋರಾಟದಲ್ಲಿ ಗಾಂಧೀಜಿಗೆ ಬೆನ್ನೆಲುಬಾಗಿ ನಿಂತಿದ್ದರು. 2 ಬಾರಿ ವಿಧಾನ ಪರಿಷತ್ ಸದಸ್ಯರಾಗಿಯೂ ಸೇವೆ ಸಲ್ಲಿಸಿದ್ದಾರೆಂದರು.

ಎಸ್.ಎಲ್.ಭೈರಪ್ಪನವರು ಕನ್ನಡ ಸಾಹಿತ್ಯಕ್ಕೆ ಅಪಾರ ಕೊಡುಗೆ ನೀಡಿದ್ದಾರೆ. ಭೈರಪ್ಪ ಅವರು ಹುಟ್ಟೂರಿನ ಸುತ್ತಲಿನ ಪ್ರದೇಶಗಳಿಗೆ ನೀರಾವರಿ ವ್ಯವಸೆ ಮಾಡಿಕೊಡುವ ಮೂಲಕ ಜನ್ಮ ನೀಡಿದ ಮಣ್ಣಿನ ಋಣ ತೀರಿಸಿದ್ದಾರೆ. ಸರ್ಕಾರದ ಮಟ್ಟದಲ್ಲಿ ಅತ್ಯಂತ ಪ್ರಭಾವ ಹೊಂದಿದ್ದ ಅವರು ಭಾಷಾ ಮತ್ತು ಶಿಕ್ಷಣ ನೀತಿ ವಿಚಾರವಾಗಿ ಮಾತನಾಡಿದ್ದರೆ ಅವರ ಅಭಿಮಾನಿ ಬಳಗ ಇನ್ನು ಹೆಚ್ಚುತ್ತಿತ್ತು ಮಾತ್ರವಲ್ಲದೆ ಸಕಾರಾತ್ಮಕ ಬದಲಾವಣೆಯೂ ಸಾಧ್ಯವಾಗುತ್ತಿತ್ತು. ಆದರೆ ಅವರು ಕೆಲವು ವಿಷಯಗಳಿಗಷ್ಟೇ ಸೀಮಿತರಾದರು. ಅವರು ವಾಗ್ವಾದ ಬಯಸುತ್ತಿದ್ದ ಲೇಖಕರು.

ಹಳೆಯ ಕಾಲದ ಬ್ರಾಹ್ಮಣ ಸಮುದಾಯವನ್ನು ಪ್ರತಿನಿಸುತ್ತಿದ್ದುದನ್ನು ಅವರ ಕಾದಂಬರಿಗಳಲ್ಲಿ ಕಾಣಬಹುದು. ವಂಶವೃಕ್ಷ, ಸಾಕ್ಷಿ, ಮತದಾನ, ಗೃಹಭಂಗದಲ್ಲಿ ಜೀವಂತಿಕೆಯನ್ನು ಕಟ್ಟಿಕೊಟ್ಟಿದ್ದಾರೆ. ಆದರೆ ಸಮಕಾಲೀನ ಜೀವನದ ಬಗ್ಗೆ ಬರೆದ ಆವರಣ, ಕವಲು, ಮತದಾನ ಕಾದಂಬರಿಯಲ್ಲಿ ಸ್ತ್ರೀ ಪಾತ್ರಗಳಿಗೆ ನೀಡಿದ ಆದ್ಯತೆ ಕುರಿತು ಎಲ್ಲರಲ್ಲೂ ಬೇಸರವಿದೆ. ಆದ್ದರಿಂದ ಅವರನ್ನು ಪ್ರಗತಿಪರರು ವಿರೋಧಿಸುತ್ತಲೇ ಬಂದರು. ಸಾಹಿತಿ ಯಾವುದೇ ಒಂದು ಪಂಥ, ರಾಜಕೀಯ ಪಕ್ಷದ ಬಗ್ಗೆ ಒಲವು ತೋರುವುದಿಲ್ಲ. ಅದಕ್ಕೆ ತದ್ವಿರುದ್ಧವಾಗಿ ಭೈರಪ್ಪ ಒಂದು ಸಿದ್ಧಾಂತ, ಪಕ್ಷವನ್ನು ಆಯ್ಕೆ ಮಾಡಿಕೊಂಡಿದ್ದರು ಎಂದು ವಿವರಿಸಿದರು.

ಸಂಕೀರ್ಣತೆ ಮತ್ತು ಸಂದಿಗ್ಧತೆಯನ್ನು ಒಗ್ಗಿಕೊಳ್ಳುವುದೇ ಸಾಹಿತ್ಯ ಎಂಬುದನ್ನು ಬಾನು ಮುಷ್ತಾಕ್ ನಿರೂಪಿಸಿದ್ದಾರೆ. ಭೈರಪ್ಪ, ಗೊರೂರು ರಾಮಸ್ವಾಮಿ ಅಯ್ಯಂಗಾರ್ ತಮ್ಮ ಸಮುದಾಯದ ಬಗ್ಗೆ ಒಲವು ಹೊಂದಿರುತ್ತಿದ್ದರು. ಆದರೆ ಬಾನು ಮುಷ್ತಾಕ್ ಕೃತಿಗಳನ್ನು ಅವರ ಸಮುದಾಯದವರು ಎಷ್ಟು ಜನರು ಓದುತ್ತಾರೆಂಬುದರ ಬಗ್ಗೆ ಅವರೇ ಹೇಳಬೇಕು. ಪ್ರೀತಿ ಮತ್ತು ವಸ್ತು ನಿಷ್ಠೆಯನ್ನು ಇವರ ಬರವಣಿಗೆಯಲ್ಲಿ ಕಾಣಬಹುದು. ಇವರ ಲೇಖನಗಳಲ್ಲಿ ಸಂವಹನ ಶೀಲತೆಯನ್ನು ಪ್ರತಿಬಿಂಬಿಸಲಾಗುತ್ತದೆ. ಅದನ್ನು ನಾವು ಯಾವಾಗಲೂ ಗೌರವಿಸಬೇಕೆಂದರು.

ಅಜೀಂ ಪ್ರೇಮ್ ಜಿ ಫೌಂಡೇಶನ್ ಮುಖ್ಯ ಸಂಯೋಜನ ಅಧಿಕಾರಿ ಸುದೀಶ್ ವೆಂಕಟೇಶ್, ಹಾಸನ ವಿಶ್ವವಿದ್ಯಾಲಯ ಕುಲ ಸಚಿವ ಡಾ. ನಾಗರಾಜ್, ಅಂತಾರಾಷ್ಟ್ರೀಯ ಬೂಕರ್ ಪ್ರಶಸ್ತಿ ವಿಜೇತ ಸಾಹಿತಿ ಬಾನು ಮುಷ್ತಾಕ್ ಹಾಜರಿದ್ದರು.

# ಪ್ರತ್ಯೇಕ ಅಪಘಾತದಲ್ಲಿ ಇಬ್ಬರ ಸಾವು

**ಕನ್ನಡ ಪೋಸ್ಟ್ ನ್ಯೂಸ್ ನೆಟ್ವರ್ಕ್**

ಅರಕಲಗೂಡು: ತಾಲ್ಲೂಕಿನ ವಿವಿಧೆಡೆ ನಡೆದ ಪ್ರತ್ಯೇಕ ಅಪಘಾತದಲ್ಲಿ ಇಬ್ಬರು ಮೃತಪಟ್ಟಿರುವ ಘಟನೆ ನಡೆದಿದೆ.

ನಿರ್ಲಕ್ಷ್ಯದ ಚಾಲನೆಯಿಂದ ಟ್ರ್ಯಾಕ್ಟರ್ ಡಿಕ್ಕಿಯಾಗಿ ಬೈಕ್ ಸವಾರ ಮೃತಪಟ್ಟಿರುವ ಘಟನೆ ಕೊಣನೂರು-ಸೋಮವಾರಪೇಟೆ ರಸ್ತೆಯ ಸಿದ್ದಾಪುರದಲ್ಲಿ ನಡೆದಿದೆ. ಬನ್ನೂರು ಗ್ರಾಮದ ಡಿ.ಮನು ಮೃತರು. ಆ. 16ರ ರಾತ್ರಿ 8.40ರ ವೇಳೆ ಊರಿಗೆ ಹೋಗುತ್ತಿದ್ದಾಗ ಹಿಂದಿನಿಂದ ವೇಗವಾಗಿ ಬಂದ ಟ್ರ್ಯಾಕ್ಟರ್ ಡಿಕ್ಕಿಯಾಗಿದೆ. ಬೈಕ್ ಸಮೇತ ರಸ್ತೆ ಮೇಲೆ ಬಿದ್ದಿದ್ದರಿಂದ ಗಂಭೀರ ಗಾಯಗೊಂಡಿದ್ದ ಮನು ಅವರನ್ನು ಕೊಣನೂರು ಆಸ್ಪತ್ರೆಗೆ ದಾಖಲಿಸಲಾಯಿತಾದರೂ ಚಿಕಿತ್ಸೆ ಫಲಿಸದೆ ಮೃತಪಟ್ಟಿದ್ದಾರೆ. ಕೊಣನೂರು ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.

ಮತ್ತೊಂದು ಪ್ರಕರಣದಲ್ಲಿ ಕಾರು ಡಿಕ್ಕಿಯಾಗಿ ಬೈಕ್ ಸವಾರ ಮೃತಪಟ್ಟಿರುವ ಘಟನೆ ಮುಗುಳೂರು ಚಾನಲ್ ಸಮೀಪ ನಡೆದಿದೆ. ದೊಡ್ಡಮಗ್ಗೆ ಹೋಬಳಿ ಕಣಿಯಾರು ಗ್ರಾಮದ ಮೋಹನ್ ಮೃತರು. ವಿಳ್ಯದೆಲೆ ಹಗಾ ಗು ಅಡಿಕೆ ವ್ಯಾಪಾರಿ ಆಗಿದ್ದ ಅವರು ಆ. 17ರ ಸಂಜೆ 7 ಗಂಟೆಗೆ ಕೆಲಸ ಮುಗಿಸಿ ಮನೆಗೆ ಹೋಗುತ್ತಿದ್ದಾಗ ಎದುರುಗಡೆಯಿಂದ ಬಂದ ಕಾರು ಡಿಕ್ಕಿಯಾಗಿದೆ. ತೀವ್ರ ರಕ್ತಸ್ರಾವವಾದ ಹಿನ್ನಲೆಯಲ್ಲಿ ಮೋಹನ್ ಸ್ಥಳದಲ್ಲೇ ಮೃತಪಟ್ಟಿದ್ದಾರೆ. ಕೊಣನೂರು ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.

# ಅರಕಲಗೂಡು ಪತ್ರಕರ್ತರ ಭವನಕ್ಕೆ 5 ಲಕ್ಷ ರೂ. ನೆರವು



**ಕನ್ನಡ ಪೋಸ್ಟ್ ನ್ಯೂಸ್ ನೆಟ್ವರ್ಕ್**

ಅರಕಲಗೂಡು: ತಾಲ್ಲೂಕು ಕಾರ್ಯನಿರತ ಪತ್ರಕರ್ತರ ಸಂಘದ ಭವನ ನಿರ್ಮಾಣಕ್ಕೆ 5 ಲ.ರೂ. ನೀಡುವುದಾಗಿ ಸಂಸದ ಶ್ರೇಯಸ್ ಪಟೇಲ್ ಭರವಸೆ ನೀಡಿದರು.

ಇತ್ತೀಚೆಗೆ ನಡೆದ ತಾಲ್ಲೂಕು ಮಟ್ಟದ ಪತ್ರಕರ್ತರ ದಿನಾಚರಣೆ ಹಾಗೂ ಭವನ ನಿರ್ಮಾಣ ಕಾಮಗಾರಿಗೆ ಶಂಕುಸ್ಥಾಪನೆ ಕಾರ್ಯಕ್ರಮದ ಬಳಿಕ ಕಟ್ಟಡ ನಿರ್ಮಾಣ ಸ್ಥಳ ಪರಿಶೀಲಿಸಿ ಮಾತನಾಡಿದರು.

ಪತ್ರಕರ್ತರ ಭವನ ಪತ್ರಕರ್ತರ ಬಹುದಿನಗಳ ಬೇಡಿಕೆಯಾಗಿದ್ದು, ಭವನ ನಿರ್ಮಾಣ ಕಾರ್ಯವನ್ನು ಆದಷ್ಟು ಬೇಗ ಪೂರ್ಣಗೊಳಿಸಿ ಪತ್ರಕರ್ತರಿಗೆ ಸೌಲಭ್ಯ ಲಭ್ಯವಾಗುವಂತೆ ಕ್ರಮ ಕೈಗೊಳ್ಳಬೇಕು ಎಂದು ಹೇಳಿದರು.

ಅರಕಲಗೂಡು ಕಾರ್ಯನಿರತ ಪತ್ರಕರ್ತರ ಸಂಘವು ಸಂಘಟಿತವಾಗಿ ಕಾರ್ಯನಿರ್ವಹಿಸುತ್ತಿದ್ದು, ಪತ್ರಕರ್ತರ ಹಿತಾಸಕ್ತಿ ಹಾಗೂ ಸಾರ್ವಜನಿಕ ಸಮಸ್ಯೆಗಳ ಕುರಿತು ನಿರಂತರವಾಗಿ ಧ್ವನಿ ಎತ್ತುತ್ತಿರುವುದು ಶ್ಲಾಘನೀಯವಾಗಿದೆ ಎಂದು ಸಂಸದರು ಮೆಚ್ಚುಗೆ ವ್ಯಕ್ತಪಡಿಸಿದರು.

ಸುದ್ದಿ ಮಾಧ್ಯಮಗಳು ಪ್ರಜಾಪ್ರಭುತ್ವದ ಪ್ರಮುಖ ಅಂಗವಾಗಿದ್ದು, ಸಮಾಜದ ಸಮಸ್ಯೆಗಳನ್ನು ಬೆಳಕಿಗೆ ತರುವಲ್ಲಿ ಪತ್ರಕರ್ತರ ಪಾತ್ರ ಮಹತ್ವದ್ದಾಗಿದೆ. ಗ್ರಾಮೀಣ ಭಾಗದ ಜನರ ಸಮಸ್ಯೆ, ಅಭಿವೃದ್ಧಿ ಕಾರ್ಯಗಳು ಹಾಗೂ ಸಾರ್ವಜನಿಕ ವಿಚಾರಗಳನ್ನು ಆಡಳಿತದ ಗಮನಕ್ಕೆ ತರುವಲ್ಲಿ ಸ್ಥಳೀಯ ಪತ್ರಕರ್ತರು ಪ್ರಮುಖ ಪಾತ್ರ ವಹಿಸುತ್ತಿದ್ದಾರೆ ಎಂದು ಹೇಳಿದರು.

ತಾಲ್ಲೂಕು ಪತ್ರಕರ್ತರ ಸಂಘದ ಅಧ್ಯಕ್ಷ ಪಿ.ಶಿವಕುಮಾರ್, ಕಾರ್ಯದರ್ಶಿ ಗಣೇಶ್ ಶೆಟ್ಟಿ, ಖಜಾಂಚಿ ರವಿ ಬೆಟ್ಟಸೋಗೆ, ಪತ್ರಕರ್ತರಾದ ಟಿ.ವಿಜಯ್ ಕುಮಾರ್, ಪಿ.ಬಿ.ವಿರೂಪಾಕ್ಷ, ರವಿ ದುಮ್ಮಿ, ಸಂತೋಷ್, ರಾಜೇಂದ್ರ, ರಘು ಇದ್ದರು.

# ಸುಧಾರಿತ ಬೆಳೆ ತಳಿಗಳ ಕುರಿತು ರೈತರಿಗೆ ಮಾಹಿತಿ



**ಕನ್ನಡ ಪೋಸ್ಟ್ ನ್ಯೂಸ್ ನೆಟ್ವರ್ಕ್**

ಚನ್ನರಾಯಪಟ್ಟಣ: ದಂಡಿಗನಹಳ್ಳಿ ಹೋಬಳಿಯ ಚೌಡೇನಹಳ್ಳಿ ಗ್ರಾಮದಲ್ಲಿ ಹಾಸನದ ಕಾರೆಕೆರೆ ಕೃಷಿ ಮಹಾವಿದ್ಯಾಲಯ ಬಿಎಸ್‌ಸಿ ಅಂತಿಮ ವರ್ಷದ ವಿದ್ಯಾರ್ಥಿಗಳು ಹಮ್ಮಿಕೊಂಡಿರುವ ಗ್ರಾಮೀಣ ಕೃಷಿ ಕಾರ್ಯಾನುಭವ ಶಿಬಿರದಲ್ಲಿ ರೈತರಿಗೆ ಸುಧಾರಿತ ಬೆಳೆ ತಳಿಗಳ ಕುರಿತು ಮಾಹಿತಿ ನೀಡಲಾಯಿತು.

ಕೃಷಿ ಮಹಾವಿದ್ಯಾಲಯದ ತಳಿಶಾಸ್ತ್ರ ಮತ್ತು ಸಸ್ಯ ತಳಿ ಅಭಿವೃದ್ಧಿ ವಿಭಾಗದ ಪ್ರಾಧ್ಯಾಪಕ ಡಾ. ಎಂ. ಎಸ್. ಪಿ. ಕಣವಿ ಅವರು ರೈತರಿಗೆ ಮಾರ್ಗದರ್ಶನ ನೀಡಿದರು.

ಪ್ರಸ್ತುತ ಹವಾಮಾನ ಪರಿಸ್ಥಿತಿಗೆ ಅನುಗುಣವಾಗಿ ರಾಗಿ ಬೆಳೆಯಲ್ಲಿ ಕೆಎಂಆರ್ 316, ಎಂಎಲ್ 322, ಕೆಎಂಆರ್ 630, ಕೆಎಂಆರ್ 301 ಮತ್ತು ಐಡಿಎಫ್-7 ಸೇರಿ ಸುಧಾರಿತ ತಳಿಗಳ ಕುರಿತು ಮಾಹಿತಿ ನೀಡಲಾಯಿತು. ಮೆಕ್ಕೆಜೋಳ ಮತ್ತು ರಾಗಿ ತಳಿಗಳ ಆಯ್ಕೆ, ಸ್ಥಳೀಯ ಹವಾಮಾನಕ್ಕೆ ಸೂಕ್ತವಾದ ತಳಿಗಳ ಬಳಕೆ ಹಾಗು ಬೆಳೆ ಉತ್ಪಾದನೆಗೆ ಸಂಬಂಧಿಸಿ ಸಂವಾದ ನಡೆಯಿತು. ಈ ಭಾಗದಲ್ಲಿ ಮೆಕ್ಕೆಜೋಳದಲ್ಲಿ ಕಂಡುಬರುವ ಬಿಳಿ ಸುಳಿ ರೋಗದ ನಿಯಂತ್ರಣದಲ್ಲಿ ಬೆಳೆ ಪರಿವರ್ತನೆಯ ಮಹತ್ವದ ಕುರಿತು ರೈತರಿಗೆ ತಿಳಿಸಲಾಯಿತು.

ವಿದ್ಯಾರ್ಥಿಗಳು ಹಾಗು ರೈತರು ಭಾಗವಹಿಸಿ ತಳಿ ಆಯ್ಕೆ, ಬೆಳೆ ಪರಿವರ್ತನೆ ಮತ್ತು ಹವಾಮಾನಕ್ಕೆ ಅನುಗುಣವಾದ ಕೃಷಿ ಪದ್ಧತಿಗಳ ಕುರಿತು ಉಪಯುಕ್ತ ಮಾಹಿತಿ ಪಡೆದರು.

# ಇತಿಹಾಸದಲ್ಲಿ ಈ ದಿನ

## ಆಗಸ್ಟ್-20

1827: ಅಮೆರಿಕದ ಪ್ರಸಿದ್ಧ ಆವಿಷ್ಕಾರಕ ಜಾನ್ ವಿಸ್ಲರ್ ಜನಿಸಿದರು.

1917: ಭಾರತದ ಸ್ವಾತಂತ್ರ್ಯ ಹೋರಾಟಗಾರ ಹಾಗೂ ರಾಜಕೀಯ ನಾಯಕ ರಾಜೀವ್ ಗಾಂಧಿ ಅವರ ಜನ್ಮದಿನ. ಈ ದಿನವನ್ನು ಭಾರತದಲ್ಲಿ ಸದ್ಭಾವನಾ ದಿನವಾಗಿ ಆಚರಿಸಲಾಗುತ್ತದೆ.

1944: ಭಾರತದ ಮಾಜಿ ಪ್ರಧಾನಿ ರಾಜೀವ್ ಗಾಂಧಿ ಜನಿಸಿದರು. ಅವರು 1984ರಿಂದ 1989ರವರೆಗೆ ಭಾರತದ ಪ್ರಧಾನಮಂತ್ರಿಯಾಗಿದ್ದರು.

1976: ಭಾರತೀಯ ಬಾಹ್ಯಾಕಾಶ ಸಂಶೋಧನಾ ಸಂಸ್ಥೆಯ ಮೊದಲ ಪ್ರಾಯೋಗಿಕ ಉಪಗ್ರಹ ಆರ್ಯಭಟ ಯೋಜನೆಯ ನಂತರದ ಬಾಹ್ಯಾಕಾಶ ಕಾರ್ಯಕ್ರಮಗಳಿಗೆ ಮಹತ್ವದ ಬೆಳವಣಿಗೆಗಳು ನಡೆದವು.

# ಪವಿತ್ರ ಯಾತ್ರಾ ಸ್ಥಳವಾಗಿ ಬದಲಾಗಲಿದೆ ಮಾಡಾಳು

**ಕನ್ನಡ ಪೋಸ್ಟ್ ನ್ಯೂಸ್ ನೆಟ್ವರ್ಕ್**

ಮಾಡಾಳು: ಇತಿಹಾಸ ಪ್ರಸಿದ್ಧ ಸ್ವರ್ಣಗೌರಿ ದೇವಾಲಯವು ಭವಿಷ್ಯದಲ್ಲಿ ನಾಡಿನ ಶ್ರೇಷ್ಠ ಧಾರ್ಮಿಕ ಯಾತ್ರಾ ಸ್ಥಳವಾಗಿ ಮಾರ್ಪಾಡಾಗಲಿದೆ ಎಂದು ಹಾರನಹಳ್ಳಿ ಕೋಡಿಮಠದ ಡಾ. ಶ್ರೀ ಶಿವಾನಂದ ಶಿವಯೋಗಿ ರಾಜೇಂದ್ರ ಸ್ವಾಮೀಜಿ ಭವಿಷ್ಯ ನುಡಿದರು.

ಮೂಲಸ್ಥಾನ ಶ್ರೀ ಸ್ವರ್ಣಗೌರಿ ದೇವಾಲಯ ಲೋಕಾರ್ಪಣೆ ಬಳಿಕ ಭಕ್ತರು ಹಮ್ಮಿಕೊಂಡಿದ ಪಾದಪೂಜೆ ಕಾರ್ಯಕ್ರಮದಲ್ಲಿ ಮಾತನಾಡಿದ ಅವರು, ತನ್ನ ಇಷ್ಟದಂತೆ ಆಲಯವನ್ನು ನಿರ್ಮಿಸಿಕೊಂಡಿರುವ ಸ್ವರ್ಣ ಗೌರಿ ದೇವಿಯು



ಮುಂದಿನ ದಿನಗಳಲ್ಲಿ ನಂಬಿ ಬರುವ ಭಕ್ತ ಸಂಕುಲವನ್ನು ಉದ್ದರಿಸುತ್ತಾಳೆ. ಈ ಗ್ರಾಮ ಪವಿತ್ರ ಧಾರ್ಮಿಕ ಯಾತ್ರಾ ಸ್ಥಳವಾಗಿ ಹೊರ ಹೊಮ್ಮಲಿದೆ ಎಂದರು.

ಸ್ವರ್ಣ ಗೌರಮ್ಮ ದೇವಿ ಶಕ್ತಿ ದೇವತೆಯಾಗಿದ್ದು ಕೋಡಿಮಠದ ಕರ್ತೃಗಳಾದ ನೀಲಮ್ಮಜ್ಜಯ್ಯ ಹಾಗೂ ಶಿವಲಿಂಗ ಸ್ವಾಮೀಜಿಯವರ ಕೃಪಾಶೀರ್ವಾದ ಶಕ್ತಿಯಾಗಿದ್ದು ಈ ದೇವಾಲಯದ ಮೂಲಕ ಜಗಜ್ಯೋತಿಯಾಗಿ ಬೆಳಗಲಿದೆ. ಬದುಕಿನಲ್ಲಿ ನೊಂದು ಬೆಂದು ಬರುವ ಭಕ್ತರ ಪಾಲಿಗೆ ಈ ಜ್ಯೋತಿಯು ನಂದಾದೀಪವಾಗಿ ಮನೆ ಮತ್ತು ಮನವನ್ನು ಬೆಳಗಲಿದೆ ನುಡಿದರು.

ಕುಪ್ಪೂರು ಗದ್ದಿಗೆ ಮಠದ ವಾಗೀಶ ಪಂಡಿತಾರಾಧ್ಯ, ಗೌರಮ್ಮ ದೇವಿ ಸೇವಾ ಸಮಿತಿ ಪದಾಧಿಕಾರಿಗಳು ಹಾಗೂ ಭಕ್ತರು ಹಾಜರಿದ್ದರು.

# ಮಹಿಳೆ ನಿಂದನೆ ಪ್ರಶ್ನಿಸಿದ್ದಕ್ಕೆ ಹಲ್ಲೆ

ಅರಸೀಕೆರೆ: ಮಹಿಳೆಯನ್ನು ಅವಾಚ್ಯ ಪದಗಳಿಂದ ನಿಂದಿಸಿದ್ದನ್ನು ಪ್ರಶ್ನಿಸಿದ್ದಕ್ಕೆ ವ್ಯಕ್ತಿಯೊಬ್ಬ ಚಾಕುವಿನಿಂದ ಮಾರಣಾಂತಿಕ ಹಲ್ಲೆ ನಡೆಸಿರುವ ಘಟನೆ ಸುಬ್ರಹ್ಮಣ್ಯ ನಗರದಲ್ಲಿ ನಡೆದಿದೆ. ನಗರದ ಜೇಮ್ಸ್ ಗಾಯಾಳು. ವಿನ್ಸಂಟ್ ರಾಜ್ ಎಂಬಾತ ಹಲ್ಲೆ ನಡೆಸಿದ್ದಾನೆ. ಶಿವಪ್ಪ ಎಂಬುವವರ ಮಗಳ ಬಗ್ಗೆ ವಿನ್ಸಂಟ್ ರಾಜ್ ಕೆಟ್ಟದಾಗಿ ಮಾತನಾಡಿದ್ದ. ಅದನ್ನು ಪ್ರಶ್ನಿಸಲೆಂದು ಆತನ ಮನೆಗೆ ಅರುಣ್ ಮತ್ತು ಜೇಮ್ಸ್ ತೆರಳಿದ್ದರು. ಈ ವೇಳೆ ಮಾತಿಗೆ ಮಾತು ಬೆಳೆದು ಏಕಾಏಕಿ ಜೇಬಿನಿಂದ ಚಾಕು ತೆಗೆದು ಜೇಮ್ಸ್‌ನ ಹೊಟ್ಟೆಗೆ ಇರಿದಿದ್ದಾನೆ. ಪರಿಸ್ಥಿತಿ ವಿಕೋಪಕ್ಕೆ ತಿರುಗುತ್ತಿದ್ದಂತೆ ಅರುಣ್, ಪ್ರವೀಣ್, ಭೈರೇಶ್ ಮತ್ತು ಸಂಜಯ್ ಗಲಾಟೆ ಬಿಡಿಸಿ ಗಾಯಾಳು ಜೇಮ್ಸ್‌ನನ್ನು ಆಸ್ಪತ್ರೆಗೆ ದಾಖಲಿಸಿದ್ದಾರೆ. ನಗರ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.

# ಅದೊಂದು ಬೇರೆಯದೇ ಅನುಭೂತಿ...9

## ಧನಂಜಯ ಜೀವಾಳ ಬಿ.ಕೆ.

**ಗ್ರಾಮಾಯಣ 51**



ಸಂಜೆಯ ಆರು ಗಂಟೆಯ ಕಾಫಿ ಅವಲಕ್ಕಿ ಸಮಾರಾಧನೆಯ ಸಮಯದಲ್ಲಿ ಮಾನ್ಯ ಹೆಡ್ಮಾಷ್ಟ್ರು ಆ ಹನ್ನೊಂದು ಜನ ಉತ್ಸಾಹಿಗಳನ್ನು ವೇದಿಕೆಗೆ ಕರೆದರು. ಅವರಲ್ಲಿ ಆ ಐದು ಜನ ಅತ್ಯುತ್ಸಾಹಿಗಳನ್ನು ಅಲ್ಲಿಯೇ ನಿಲ್ಲಲು ಹೇಳಿ ಉಳಿದ ಆರು ಜನರಿಗೆ ವಾಪಾಸ್ಸು ಇತರೆಲ್ಲರೊಡನೆ ಸೇರಿಕೊಳ್ಳಲು ಹೇಳಿದರು. ಈ ಐವರು ಮಾಡಿದ ಸಾಹಸವನ್ನು ಇಡೀ ಪ್ರವಾಸಿ ತಂಡಕ್ಕೆ ನಿರೂಪಣೆ ಮಾಡಿ ಹೇಳಲಾಯಿತು. ಆಗ ವಿವರ ನೀಡಲು ಮೇಲೆದ್ದ ಗಿರೀಶ್ಮೇಷ್ಟ್ರು, ಚಾರಣ ಹೋದಾಗ ಹೇಗೆ ನಡೆದುಕೊಳ್ಳಬೇಕೆಂದು ನಿಮಗೆಲ್ಲರಿಗೂ ಈ ಹಿಂದೆಯೇ ಹೇಳಿದ್ದೆವು. ತಂಡವನ್ನು ಬಿಟ್ಟು ಅಥವಾ ತಂಡದ ನಾಯಕನ ಗಮನಕ್ಕೆ ಬಾರದಂತೆ ಪ್ರತ್ಯೇಕವಾಗಿ ಹೋಗುವುದಾಗಲೀ, ಹಿಂದೆಯೇ ಉಳಿಯುವುದಾಗಲೀ ಮಾಡಬಾರದೆಂದು ಗಿಣಿಗೆ ಹೇಳುವಂತೆ ಹೇಳಿದ್ದವಲ್ವೇ? ನೀವು ಮಾಡಿದ್ದ ಕೆಲಸವಾದರೂ ಎಂಥದ್ದು ಎಂಬುದು ನಿಮಗೆ ಗೊತ್ತೇ? ಕಾಳಿಂಗ ಸರ್ಪದ ಹೆಸರು ಕೇಳಿದ್ದೀರಾ? ಹದಿನೆಂಟು ಇಪ್ಪತ್ತಡಿ ಬೆಳೆಯುವ ಈ ಹಾವು ಆಹಾರಕ್ಕಾಗಿ ತಿನ್ನೋದೇ ಇತರ ಜಾತಿಯ ಹಾವುಗಳನ್ನ. ಇದರ ಒಂದು ಕಡಿತ ಒಂದು ದೊಡ್ಡ ಆನೆಯನ್ನು ಸಹ ಕೊಲ್ಲಬಲ್ಲದು. ಇದು ಮೊಟ್ಟೆಯಿಟ್ಟು, ಕಾವು ಕೊಟ್ಟು ಮರಿಮಾಡುವ ಸಮಯಕ್ಕೆ ಒಂದಷ್ಟು ಹುಲ್ಲನ್ನು ಬಾಲದಿಂದ ಬಡಿದು, ನೂಕಿಕೊಂಡು ತಂದು ಮೆದೆಯಂತೆ ರಾಶಿ ಹಾಕಿಕೊಳ್ಳುತ್ತದೆ. ಆ ಹುಲ್ಲಿನ ಮೆದೆಯಡಿಯಲ್ಲಿ ಮೊಟ್ಟೆಗಳನ್ನು ಜೋಡಿಸಿಕೊಂಡು ಕಾವು ಕೊಡಲಾರಂಭಿಸುತ್ತದೆ. ತನಗೆ ಆಹಾರ ಸಂಗ್ರಹಿಸಲು ಹೊರಹೋಗುವ ಸಂದರ್ಭದಲ್ಲಿ ತನ್ನ ಸಂಗಾತಿಯನ್ನು ಮೊಟ್ಟೆಗಳ ಕಾವಲಿಗೆ ನಿಲ್ಲಿಸುವ ಈ ಕಾಳಿಂಗ ಮೊಟ್ಟೆಗಳಿಗೆ ಕಾವು ಕೊಡುವ ಸಮಯದಲ್ಲಿ ತೀರಾ ಆಕ್ರಮಣಕಾರಿಯಾಗಿರುತ್ತೆ. ದೂರದಿಂದಲೇ ನಮ್ಮನ್ನು ಗಮನಿಸುವ ಇವು ಅತ್ಯಂತ ವೇಗವಾಗಿ ಆಕ್ರಮಣ ನಡೆಸುತ್ತವೆ. ನೀವು ಐವರಿಗೂ ಇವತ್ತು ಸಿಕ್ಕಿರೋದು ಪುನರ್ಜನ್ಮ ತಿಳ್ಕಳಿ, ಕಂತ್ರಿಗಳಾ!!.

ಹಿಂದಿನ ದಿನದಂತೆಯೇ ಇಂದೂ ಸಹಾ ರಾತ್ರಿಯೂಟದ ಅಡುಗೆಗೆ ಸಿದ್ಧತೆ, ಟೆಂಟುಗಳ ಅಳವಡಿಕೆ, ಕ್ಯಾಂಪ್ ಫೈರಿನ ಹೂಡುವಿಕೆ ನಡೆಯಿತು. ಹಿಂದಿನ ದಿನ ಯಾರ್ಯಾರು ಟೆಂಟುಗಳಲ್ಲಿ ರಾತ್ರಿ ಕಳೆದಿದ್ದರೋ, ಅವರುಗಳು ಇವತ್ತು ಕಡ್ಡಾಯವಾಗಿ ಬಸ್ಸಿನಲ್ಲಿಯೇ ವಿಶ್ರಮಿಸಬೇಕಾಗಿತ್ತು. ಟೆಂಟ್ ವಾಸ್ತವ್ಯದ ಸಂತಸ ಎಲ್ಲರಿಗು ಲಭ್ಯವಾಗಲೆಂದು ಹೆಡ್ಮಾಸ್ಟ್ರೇ ಈ ಉಪಾಯ ಮಾಡಿದ್ದರು.

ನಾಳೆ ಹೋಗಲಿರುವ ಮುತ್ತೋಡಿ ಅಭಯಾರಣ್ಯಕ್ಕೆ ಪೂರ್ವಭಾವಿಯಾಗಿ ಒಂದಷ್ಟು ವಿಚಾರಗಳನ್ನು ಮಕ್ಕಳು ಹಾಗೂ ಸಹೋದ್ಯೋಗಿಗಳ ಗಮನಕ್ಕೆ ತರಲೆಂದು ಗಿರೀಷ್ಮೇಷ್ಟ್ರು ತಮ್ಮ ಈ ಹಿಂದಿನ ಮುತ್ತೋಡಿ ಭೇಟಿ ಕಾಲದ ಘಟನೆಯೊಂದನ್ನು ವಿವರಿಸಲು ಕುಳಿತರು.

ಈ ಸೀಳು ನಾಯಿಗಳು ಎಷ್ಟು ವ್ಯವಸ್ಥಿತ ಬೇಟೆಗಾರರು ಹಾಗು ಅಪಾಯಕಾರೀ ಹಂತಕರು ಎಂಬುದು ನನಗೆ ಈಗ್ಗೆ ಹನ್ನೆರಡು ವರ್ಷಗಳ ಹಿಂದಿನ ಒಂದು ಘಟನೆ ಖಚಿತಪಡಿಸಿತ್ತು.

ಬಿರುಬೇಸಿಗೆಯ ಆ ದಿನ ನಾವು ಎಂಟ್ಹತ್ತು ಜನ ಟೆಂಪೋ ಟ್ರ್ಯಾಕ್ಸ್ ವಾಹನದಲ್ಲಿ ಮುತ್ತೋಡಿ ಅಭಯಾರಣ್ಯಕ್ಕೆ ಕಾಡು, ವನ್ಯಜೀವಿ, ಜಲಾವಾರಗಳ ಉಗಮಗಳ ಕುರಿತಾದ ಸಹಜ ಕುತೂಹಲದಿಂದ ಹೋಗಿದ್ದೆವು. ಕಾಡುಮೃಗಗಳು ತಮ್ಮ ನೀರಿನ ಅಗತ್ಯಕ್ಕಾಗಿ ಅಲ್ಲಲ್ಲಿ ಇದ್ದ ಜೌಗು ಪ್ರದೇಶಗಳಿಗೆ ಭೇಟಿ ನೀಡುತ್ತವೆ. ಅಂತಹ ಆಯಕಟ್ಟಿನ ಸ್ಥಳಗಳಲ್ಲಿ ಪ್ರಾಣಿ ವೀಕ್ಷಣೆಗೆ ಅನುಕೂಲವಾಗಲೆಂದು ಅರಣ್ಯ ಇಲಾಖೆಯವರು ಕಾಡಿನ ಒಳಗೆ ಅಲ್ಲಲ್ಲಿ ವೀಕ್ಷಣಾ ಗೋಪುರಗಳನ್ನು ನಿರ್ಮಿಸಿದ್ದರು. ಕ್ರಮಿಸುತ್ತಾ ಕ್ರಮಿಸುತ್ತಾ ಆ ಅಗಾಧ ವಿಸ್ತೀರ್ಣದ ಅಭಯಾರಣ್ಯದ ಮಧ್ಯಭಾಗಕ್ಕೆ ಬಂದಿದ್ದೆವು.

ಮುಗಿಲೆತ್ತರದ ಮರಗಳ ಬುಡದಲ್ಲಿ ಲಂಟಾನಾದ ಕುರುಚಲು ಗಿಡಗಳ ದಟ್ಟ ಪೊದೆಗಳು. ನಮ್ಮೊಂದಿಗೆ ಬಂದಿದ್ದ ಹುಡುಗ-ಹುಡುಗರು ಬೈನಾಕ್ಯುಲರ್, ಕ್ಯಾಮೆರಾಗಳನ್ನು ಹಿಡಿದುಕೊಂಡು ಸಡಗರದಿಂದ ವೀಕ್ಷಣಾ ಗೋಪುರದ ಅಟ್ಟಣಿಗೆಯನ್ನು ಏರಿ, ಕುತೂಹಲದಿಂದ ಅಷ್ಟೆತ್ತರದಿಂದ ಸುತ್ತಲಿನ ಚಲನವಲನಗಳನ್ನು ಸೂಕ್ಷ್ಮವಾಗಿ ಗಮನಿಸತೊಡಗಿದರು. ನಾನಿನ್ನೂ ವಾಹನದ ಬಳಿಯೇ ಇದ್ದು, ಕೊಂಡೋಯ್ದಿದ್ದ ಕಲ್ಲಂಗಡಿ ಹಣ್ಣನ್ನು ಟ್ಯಾಕ್ಸಿನ ಬಾನೆಟ್ಟಿನ ಮೇಲೆ ಹಾಸಿದ್ದ ದಿನಪತ್ರಿಕೆಯ ಮೇಲಿನಿಂದ ಉರುಳದಂತೆ ಹಿಡಿದಿಟ್ಟುಕೊಂಡು ಕತ್ತರಿಸಲೆಂದು ಚಾಕನ್ನು ಶುಚಿಗೊಳಿಸಲು ನಾ ತೊಟ್ಟಿದ್ದ ಜೀನ್ಸ್ ಪ್ಯಾಂಟಿನ ಮೇಲೆ ಉಜ್ಜುತ್ತಿದ್ದೆ.

ಅಷ್ಟರಲ್ಲಿ ನಮ್ಮ ವಾಹನದ ಡ್ರೈವರ್ ಇಬ್ರಾಹಿಂ, ಸ್ಸಾರ್, ಸ್ಸಾರ್, ಅಲ್ನೋಡಿ, ಅಲ್ನೋಡಿ ಎಂದು ಪಿಸುಗುಟ್ಟುವ ದನಿಯಲ್ಲಿ ಗಡಿಬಿಡಿಯ ಆತಂಕದಲ್ಲಿಯೇ ಕೂಗಿದ. ಎಂಥದು ಎನ್ನುವಂತೆ ಅವನ ಮುಖವನ್ನೇ ಪ್ರಶ್ನಾರ್ಥಕವಾಗಿ ನೋಡಿದೆ. ನಮ್ಮ ವಾಹನ ನಿಂತಿದ್ದ ದಿಕ್ಕಿನಲ್ಲಿಯೇ ನನ್ನ ಬೆನ್ನಿನ ಹಿಂಭಾಗದೆಡೆಗೆ ದೃಷ್ಟಿಸುತ್ತಾ ಅತ್ತ ನೋಡುವಂತೆ ಹುಬ್ಬು ಹಾರಿಸುವ ಮೂಲಕ ಸಂಕೇತ ನೀಡಿದ. ಸರಕ್ಕನೇ ತಿರುಗಿ ನಿಂತು ಚಕಚಕನೆ ಆ ಲಂಟಾನಾದ ಪೊದೆಯೊಳಗೆ ಕಣ್ಣಾಡಿಸಿದೆ. ಭಾರೀ ಗಾತ್ರದ ಜಿಂಕೆಯೊಂದು ಗಾಬರಿ ಹಾಗೂ ಆತಂಕದಿಂದ ಗಲಿಬಿಲಿಗೊಂಡು ಯಾವುದರಿಂದಲೋ ತಪ್ಪಿಸಿಕೊಂಡು ಪಾರಾಗಲು ತಹತಹಿಸುತಿತ್ತು.

ಪೊದೆಯು ದಟ್ಟವಾಗಿದ್ದರಿಂದ ಆ ಜಿಂಕೆಯ ಬೃಹದಾಕಾರದ ಕೋಡುಗಳು ಮತ್ತು ಒಂದೆರಡು ಬಾರಿ ಅದರ ಗೊರಸುಗಳು ಕಾಣಿಸಿಕೊಳ್ಳತೊಡಗಿತು. ಇದ್ದಕ್ಕಿದ್ದಂತೆ ಆ ಜಿಂಕೆಯ ಸುತ್ತಮುತ್ತ ಅಸಹಜ ಚಟುವಟಿಕೆ ಗೋಚರಿಸತೊಡಗಿತು. ನೋಡನೋಡುತಿದ್ದಂತೆ ಮೂರು ಸೀಳು ನಾಯಿಗಳು ಜಿಂಕೆಯ ಎಡಭಾಗದಿಂದ ಹೊಂಚು ಹಾಕುತ್ತಿರುವುದು ಗಮನಕ್ಕೆ ಬಂತು. ಹಾ! ಹಾ! ಎನ್ನುತ್ತಿದ್ದಂತೆ ಅವೆಲ್ಲಿದ್ದವೋ ಇನ್ನಾರು ಕೆಂಬಣ್ಣದ ಸೀಳು ನಾಯಿಗಳು ಜಿಂಕೆ ಹಾಗೂ ನಮ್ಮ ನಡುವಿನ ಬಯಲಿನಲಿ ಅಟಕಾಯಿಸಿಕೊಂಡವು. ಬಡಕಲು ಬಡಕಲಾಗಿದ್ದ, ಸರಿಯಾಗಿ ಜಾಡಿಸಿದರೆ ಕಯಂಕ್ ಸಹಾ ಎನ್ನದೇ ಸಾಯಬಹುದಾಗಿದ್ದ ಬೀದಿನಾಯಿಗಳಂತಿದ್ದ ಆ ಕೆನ್ನಾಯಿಗಳಿಗೆ ಈ ಹೋರಿಯಂತಿರುವ ಜಿಂಕೆ ಹೆದರುತ್ತಿದೆಯಲ್ಲ ಎಂದೆನಿಸಿತು.

ಆಗತಾನೇ ಕೇಬಲ್ ಟಿವಿಯಲ್ಲಿ ಡಿಸ್ಕವರಿ, ನ್ಯಾಷನಲ್ ಜಿಯಾಗ್ರಾಫಿಕ್ ಚಾನಲ್ಲುಗಳು ಪ್ರಸಾರ ಪ್ರಾರಂಭಿಸಿದ್ದವು. ಇಂಥಾ ಅಪೂರ್ವ ಪ್ರಸಂಗವನ್ನು ದಾಖಲಿಸುವ ಅವಕಾಶ ಸಿಕ್ಕಿದೆಯೆಂದು ಹಿಗ್ಗಿದೆ. ಕೆಲವೇ ದಿನಗಳ ಹಿಂದೆ ಡಿಜಿಟಲ್ ಕ್ಯಾಮೆರಾವೊಂದನ್ನು ಕೊಂಡಿದ್ದೆ. ಇಷ್ಟು ಹತ್ತಿರದಿಂದ ಸಹಜಬೇಟೆಯ ದೃಶ್ಯ ಸೆರೆಹಿಡಿಯುವ ಸಂದರ್ಭ ಎಲ್ಲರಿಗೂ ಸಿಗುವುದಿಲ್ಲವಾದ್ದರಿಂದ, ಕಲ್ಲಂಗಡಿಯನ್ನು ನಿಧಾನವಾಗಿ ಇಬ್ರಾಹಿಂ ಕೈಗೆ ವರ್ಗಾಯಿಸಿ, ಸೊಂಟಕ್ಕೆ ಕಟ್ಟಿಕೊಂಡಿದ್ದ ಕ್ಯಾಮೆರಾ ಪೌಚಿನಿಂದ ಒರೆಯಿಂದ ಕತ್ತಿಯನ್ನು ಹೊರಸೆಳೆಯುವಂತೆ! ಕ್ಯಾಮೆರಾ ಹೊರತೆಗೆದೆ. ಎಡಗೈಯ್ಯಲ್ಲಿ ಕಲ್ಲಂಗಡಿ ಕತ್ತರಿಸುವ ಚಾಕು, ಬಲಗೈಲಿ ಕ್ಯಾಮೆರಾ ಹಿಡಿದು ಸುತ್ತಮುತ್ತಲೂ ಜರುಗುತ್ತಿರುವ ವಿದ್ಯಮಾನಗಳ ಪರಿಗಣಿಸದೇ ತದೇಕಚಿತ್ತನಾಗಿ ಆಗಾಗ ದಿಕ್ಕು ಬದಲಿಸುತಿದ್ದ ಜಿಂಕೆಯ ಕೋಡಿನ ತುದಿಗಳನ್ನೇ ನೋಡುತ್ತಾ ಅರೆಕುಕ್ಕರಗಾಲಿನಲ್ಲಿ ಕಳ್ಳಹೆಜ್ಜೆಗಳನ್ನಿಡುತ್ತಾ ಮುಂದೆಮುಂದೆ ಕ್ರಮಿಸುತಿದ್ದೆ.

ಕಣ್ಣು ಮುಚ್ಚಿತೆರೆಯುವುದರೊಳಗೆ ಮತ್ತೈದು ನಾಯಿಗಳು ಪ್ರತ್ಯಕ್ಷವಾಗಿ ಬಡಕ್ಕನೆ ಜಿಂಕೆಯ ಮೇಲೆರಗಿದವು. ಆ ಜಿಂಕೆ ಆಂಯ್ ಎಂದು ಸದ್ದು ಮಾಡಿದ್ದೂ ಸಹಾ ಕೇಳಲಿಲ್ಲ. ಅದನ್ನು ಸುತ್ತುವರೆದು ವೆಲ್ ಪ್ಲಾನ್ಡ್ ಅಂಡ್ ಫೂಲ್ ಪ್ರೂಫ್ ಕಿಲ್ ಮಾಡಿದ ಹಂತಕ ಸೀಳುನಾಯಿಗಳು ಗುರುಗುಟ್ಟಿದ್ದಾಗಲೀ, ತಮ್ಮ ತಮ್ಮಲ್ಲೇ ಹಿಸ್-ಕ್ರಿಸ್ ಎಂದು ಕಿತ್ತಾಡಿದ್ದಾಗಲೀ ಒಂದು ಸಣ್ಣ ಸದ್ದೂ ಕೇಳಿಸಲಿಲ್ಲ!! ನೀವು ನಂಬಲಿಕ್ಕಿಲ್ಲ, ಕೇವಲ ಮೂರರಿಂದ ನಾಲ್ಕು ನಿಮಿಷದೊಳಗೆ ಕನಿಷ್ಠ ಎರಡು ವರ್ಷದ ಹೋರಿಯ ಗಾತ್ರವಿದ್ದ ಆ ದಷ್ಟಪುಷ್ಟ ಜಿಂಕೆಯನ್ನು ನೆಲದ ಮೇಲೆ ರಕ್ತ, ಮಾಂಸ, ಮಜ್ಜೆ ಮತ್ತಾವುದೇ ತ್ಯಾಜ್ಯದ ಕುರುಹೂ ಉಳಿಯದಂತೆ ಗಾಳಿಯಲ್ಲಿಯೇ ಎತ್ತಾಡಿಸುತ್ತಲೇ ಹೇಳಹೆಸರಿಲ್ಲದಂತೆ ಮಂಗಮಾಯ ಮಾಡಿಹಾಕಿದವು!

ಕ್ಯಾಮೆರಾ ಹೊಂದಿಸುವ ಹೊತ್ತಿಗಾಗಲೇ ತಮ್ಮ ಭೋಜನ ಕಾರ್ಯಕ್ರಮವನ್ನು ಮುಗಿಸಿಯೇ ಹಾಕಿದ್ದ ಆ ಸೀಳುನಾಯಿಗಳ ಕಬಳಿಕಾ ಸಾಮರ್ಥ್ಯವನ್ನು ಕಂಡು ಕಕ್ಕಾಬಿಕ್ಕಿಯಾಗಿ ಹಿಂದಿರುಗಲುಪಕ್ರಮಿಸುತಿದ್ದ ನನ್ನನ್ನು ಎಚ್ಚರಿಸಿದ್ದು ಸುಮಾರು ಎಪ್ಪತ್ತೆಂಬತ್ತು ಮೀಟರ್ ದೂರದಿಂದ ಕೇಳಿಬಂದ ಇಬ್ರಾಹಿಂನ ಕೂಗು. ಸ್ಸಾರ್!ಸ್ಸಾರ್! ಪಕ್ದಲ್ ನೋಡೀ! ನೋಡೀ!!ಟಿಟಿ ಎಂಥದಪ್ಪಾ ಎಂದುಕೊಳ್ಳುತ್ತಾ ಬಲಕ್ಕೆ ತಿರುಗುತ್ತೇನೆ!! ಪಕ್ಕದಲ್ಲೇ ಬಾಂಬ್ ಬಿದ್ದಂತಾಯಿತು!! ಕೈಕಾಲೆಲ್ಲಾ ತಣ್ಣಗಾಗಿಬಿಟ್ಟವು! ಮಂಡಿ ಚಿಪ್ಪಿನೊಳಗಿನ ಕಸುವೆಲ್ಲ ಒಮ್ಮೆಲೆ ಇಂಗಿ ಹೋದಂತಾಯಿತು. ಇಡೀ ದೇಹವೇ ಸಂಪೂರ್ಣವಾಗಿ ಗಾಳಿ ತೆಗೆದ ಬಲೂನಿನಂತೆ ಬಳಲಿ ಮಸಳಿಸಿತು. ಕೈಯ್ಯಳತೆಯ ದೂರದಲ್ಲಿಯೇ ಎರಡು ಸೀಳು ನಾಯಿಗಳು ತಲೆತಗ್ಗಿಸಿ ಮೇಲ್ಗಣ್ಣುಗಳನ್ನು ಅರಳಿಸಿಕೊಂಡು ನನ್ನ ಮೇಲೆ ನೆಗೆದು ಅಪ್ಪಳಿಸಲು ಕ್ಷಣಗಣನೆ ಮಾಡುತ್ತಿವೆ! ಹೇಗೆ ಪ್ರತಿಕ್ರಿಯಿಸುವುದೆಂದು ಗೊತ್ತಾಗುತ್ತಿಲ್ಲ. ದೇಹದಾಳದಿಂದೆಲ್ಲೋ ಅಡ್ರಿನಲಿನ್ ಸರ್ರಕ್ ಎಂದು ಉಕ್ಕಿ, ದೇಹದಾದ್ಯಂತ ಪ್ರವಹಿಸಿ, ಶರೀರವನ್ನು ಸ್ಥಿಮಿತದಲ್ಲಿಡುವ ತನ್ನ ಕೆಲಸ ಮಾಡತೊಡಗಿತು. ಎಡಗಡೆಯಿಂದ ತಲೆ ತಿರುಗಿಸಿ ಎದುರು ನೋಡುತ್ತೇನೆ, ಅತ್ತಕಡೆಯಿಂದಲೂ ನಾಲ್ಕೈದು ಅವೇ ಸೀಳುನಾಯಿಗಳು ತಮ್ಮ ರಕ್ತಸಿಕ್ತ ಬಾಯಿ, ಮುಸುಡಿಗಳನ್ನು ಅಸಹ್ಯವಾಗಿ ಹಾಗೂ ಬೀಭತ್ಸವಾಗಿ ಮುದುರುಮುದುರು ಮಾಡಿಕೊಳ್ಳುತ್ತಾ ಮುಂದಡಿಯಿಡಲಾರಂಭಿಸಿದವು. ಅಲ್ಲಿಗೆ ನಿಶ್ಚಯವಾಯಿತು, ತಮ್ಮ ಬೇಟೆಯ ಔತಣಕ್ಕೆ ಅಡಚಣೆಯಾದವನನ್ನೂ ಆ ಔತಣದ ಮುಂದುವರೆದ ಹಂತದ ಭಾಗವನ್ನಾಗಿ ಮಾಡಿಕೊಳ್ಳಲು ಆ ಹಂತಕ ಮೃಗಗಳು ತೀರ್ಮಾನಿಸಿವೆಯೆಂದು.

ಎಡಗೈಲಿ ಮೂರಂಚಿನ ಕಲ್ಲಂಗಡಿ ಕುಯ್ಯುವ ಚಾಕು, ಬಲಗೈಲಿ ಅರ್ಧ ಕೇಜಿ ತೂಕದ ಕ್ಯಾಮೆರಾ ಹಿಡಿದುಕೊಂಡು ಬೀದಿಹೆಣದಂತೆ ಸಾಯಲೇಬೇಕಾದ ಸನ್ನಿವೇಶದಲ್ಲಿ ಬೆದರಿದ ಬೆಪ್ಪನಂತೆ ಬಿಳಿಚಿಕೊಂಡು ಏನೂ ಮಾಡಲಾಗದ ಅಸಹಾಯಕತೆಯಿಂದ ನಿಂತಿದ್ದೆ. ಅಷ್ಟರಲ್ಲಿ ಇಬ್ರಾಹಿಂ ಟ್ಯಾಕ್ಸ್ ಚಾಲೂ ಮಾಡಿದವನೇ ಜೋರಾಗಿ ಹಾರ್ನ್ ಮಾಡಿದ.

ಆ ಸದ್ದಿಗೆ ಒಂದರೆ ಕ್ಷಣ ತಿರುಗಿ ನೋಡಿದ ನನ್ನ ಸಮೀಪವೇ ಇದ್ದ ಆ ಎರಡು ಸೀಳು ನಾಯಿಗಳು ಮತ್ತೆ ನನ್ನೆಡೆಗೆ ತಿರುಗಿದವೇ ಆಲ್ಮೋಸ್ಟ್ ಹೊಟ್ಟೆ ಬಗೆದೇಬಿಟ್ಟವೇನೋ ಎನ್ನುವಂತೆ ಕುಪ್ಪಳಿಸಿಯೇ ಬಿಟ್ಟವು! ಆ ಹಾರ್ನ್ ಆದದ್ದು, ಮತ್ತಾ ನಾಯಿಗಳು ಅತ್ತ ಗಮನಿಸಿದ ಗಳಿಗೆಗಳ ನಡುವಿನ ಸೂಕ್ಷ್ಮಾತಿಸೂಕ್ಷ್ಮ ಗ್ಯಾಪಿನಲ್ಲಿ ನನ್ನ ಹಿಮ್ಮಡಿಯ ಪಕ್ಕದಲ್ಲೇ ಬಿದ್ದಿದ್ದ ಮರದ ಒಣ ಗೆಲ್ಲೊಂದನ್ನು ರಪಕ್ಕನೆ ಕೈಗೆತ್ತಿಕೊಂಡಿದ್ದೆ. ಎದುರಿನಿಂದ ನಿಶ್ಚಿತ ಗುರಿಯೆಡೆಗೆ ದೃಢ ತೀರ್ಮಾನದೊಂದಿಗೆ ಬರುತಿದ್ದ ಆ ಏಳೆಂಟು ನಾಯಿಗಳು ಸಹಾ ವಿಲಕ್ಷಣ ಉನ್ಮಾದದಿಂದ ನಾಲಗೆ ಹೊಸೆಯುತ್ತಾ, ಹಲ್ಲುಗಳನ್ನು ಮಸೆಯುತ್ತಾ ಸಮೀಪಿಸಿಯೇ ಬಿಟ್ಟಿದ್ದವು. ಮತ್ತಿಮರದಿಂದ ಎಂದೋ ಒಣಗಿ ಉದುರಿ ಬಿದ್ದಿದ್ದ, ಆ ಬಿಸಿಲಿಗೆ ಒಣಗೀ ಒಣಗೀ ದಗ್ಗುಲೇ ಆಗಿಹೋಗಿದ್ದ ಆ ಗೆಲ್ಲಿನಿಂದ ಯಾವುದಕ್ಕಾದರೂ ಹೊಡೆಯುವುದು ಹೋಗಲೀ, ಸುಮ್ಮನೇ ಗಾಳಿಯಲ್ಲಿ ಬೀಸಿದರೂ ಅದಾಗಿಯೇ ಮುರಿದು ಕಳಕ್ಕನೇ ಕೆಳಗೆ ಬೀಳುವ ಸ್ಥಿತಿಯಲ್ಲಿತ್ತು.

ಈ ಸೀಳುನಾಯಿಗಳು ಯಾವುದೇ ಪ್ರಾಣಿಯನ್ನು ಒಮ್ಮೆ ತನ್ನ ಬೇಟೆ ಎಂದು ನಿಗದಿಮಾಡಿಕೊಂಡರೆ ಮುಗಿಯಿತು; ಆ ಬಲಿಪ್ರಾಣಿ ಆನೆ, ಹುಲಿ, ಸಿಂಹ, ಕಾಡೆಮ್ಮೆ ಇರಲಿ ಕಡೆಗೆ ಮೊಸಳೆಯಾಗಿದ್ದರೂ ಸರಿ, ಬಿಡಲ್ಲ. ಕ್ಷಣಕ್ಷಣಗಳೊಳಗೆ ತೀರ್ಮಾನ ಹಾಗೂ ಕಾರ್ಯಾಚರಣೆ ಮಾಡಲೇಬೇಕಾದ ಸ್ಥಿತಿ. ಅಲ್ಲಲ್ಲಿ ಬೆಳೆಸಿದ್ದ ಸಾಗುವಾನಿ ಮರಗಳಿಂದ ಉದುರಿದ್ದ ಅಗಲವಾದ ಎಲೆಗಳು, ಈ ಎಗ್ಗಿಬಿಷನ್ನಗಳಲ್ಲಿ ಕರಿದು ಇಪ್ಪತ್ತು ರೂಪಾಯಿಗೊಂದರಂತೆ ಮಾರುವ ಬಾಂಡಲಿಯಗಲದ ಹಪ್ಪಳಗಳಂತೆ ಕಾಡಿಡೀ ಚೆಲ್ಲಾಡಿಕೊಂಡು ಬಿದ್ದಿದ್ದವು. ಅವೈಜ್ಞಾನಿಕ ನೆಡುತೋಪು ಯೋಜನೆಗಳು ಹೇಗೆ ಕಾಡಿನ ಅವನತಿಗೆ ಕಾರಣವಾಗುತ್ತವೆ ಎಂದರೆ, ಅಗತ್ಯವಿಲ್ಲದ ಸಂದರ್ಭವಾದ ಮಳೆಗಾಲದಲ್ಲಿ ಮೈತುಂಬಾ ಸೊಪ್ಪು ತುಂಬಿಸಿಕೊಂಡು ನಿಲ್ಲುವ ಈ ಸಾಗುವಾನಿ ಮರಗಳು ಬೇಸಿಗೆಯಲ್ಲಿ ಒಂದೇಒಂದು ಎಲೆ ಉಳಿಯದಂತೆ ಉದುರಿಸಿಕೊಂಡು ಬೆತ್ತಲೆಯಾಗುತ್ತವೆ. ಇಡೀ ತೋಪು ಯಾವ ಕ್ಷಣ ಬೇಕಾದರೂ ಕಾಳ್ಗಿಚ್ಚಿಗೆ ಇಂಬಾಗುವ ಹಾಗೂ ತುತ್ತಾಗುವ ಸನ್ನಿವೇಶಕ್ಕೆ ಕಾರಣೀಭೂತವಾಗಿ ಕಾಯುತ್ತಿರುತ್ತದೆ.

ಎದುರಿಗೆ ಮಾಣಿಕ್ಯದಂತೆ ಕಂಡ ಮುಷ್ಠಿಗಾತ್ರದ ಕಲ್ಲೊಂದನ್ನು ಲಬಕ್ಕನೇ ಕೈಗೆತ್ತಿಕೊಂಡವನೇ ಆ ಹಿಂಡಿನಿಂದ ತಪ್ಪಿಸಿಕೊಳ್ಳಲು ಸಾಧ್ಯವಿರುವ ಎಲ್ಲಾ ಸಾಧ್ಯತೆಗಳ ಕುರಿತು ಆಲೋಚಿಸತೊಡಗಿದೆ. ನನ್ನೊಳಗಿದ್ದ ಮನುಷ್ಯನೆಂಬ ಪ್ರಾಣಿಯ ಬೇಸಿಕ್ ಇನ್ಸ್ಟಿಂಕ್ಟ್ ಸಹಾ ಆ ಅಪಾಯವನ್ನು ನಿಬಾಯಿಸುವ ಬಗೆಯನ್ನು ಪರ್ಯಾಯವಾಗಿ ಯೋಚಿಸುತಿತ್ತು ಹಾಗೂ ಯೋಜಿಸುತಿತ್ತು. ಅಷ್ಟರಲ್ಲಾಗಲೇ ನಮ್ಮ ಟ್ಯಾಕ್ಸಿನ ಕಡೆಯಿಂದ ಕಲ್ಲುಗಳನ್ನು ತೂರಲಾರಂಭಿಸಿದರು. ಅದರಲ್ಲೆರಡು ಕಲ್ಲುಗಳು ನೆಲಕ್ಕೆ ಬಿದ್ದು ಪುಟಿದು ನನಗೇ ಬಡಿದವು. ಇಬ್ರಾಹಿಂ ವಾಹನವನ್ನು ಚಾಲನೆ ಮಾಡಿಕೊಂಡು ಹತ್ತಿರಕ್ಕೆ ಬಂದೇಬಿಟ್ಟ.

ಆದರೆ, ರಸ್ತೆಯ ಎರಡೂ ಬದಿ ತೆಗೆದಿದ್ದ ಟ್ರೆಂಚ್ ಕಾರಣದಿಂದ ನಾನಿದ್ದ ಜಾಗಕ್ಕೆ ಬರಲಾಗದೇ ಮುಂದಿನ ಎಡಬಾಗದ ಚಕ್ರ ಚರಂಡಿಯ ಗುಂಡಿಯೊಳಗೆ ಸಿಕ್ಕಿಹಾಕಿಕೊಂಡು, ಅದೊಂದು ಯಡವಟ್ಟಾಯಿತು. ವಾಹನದ ಹಾರ್ನ್, ನಮ್ಮ ಗುಂಪಿನವರ ಶಿಳ್ಳೆ, ಕೇಕೆ ಹಾಗೂ ಕಲ್ಲಿನ ದಾಳಿಗೆ ವಿಚಲಿತಗೊಂಡ ಆ ಸೀಳುನಾಯಿಗಳು ನಿಧಾನವಾಗಿ ಹಿಂದಡಿಯಿಟ್ಟವು.

ವಿಧಿಯಿಲ್ಲದೇ ಹಿಮ್ಮೆಟ್ಟುವ ಸಂದರ್ಭದಲ್ಲಿ ಸಹಾ ಆ ಗುಂಪಿನಲ್ಲಿದ್ದ ನಾಲ್ಕೈದು ನಾಯಿಗಳು ಬೇಟೆಯನ್ನು ಅಪ್ಪಳಿಸಿ ಕೆಡವಲು ಸಾಧ್ಯವಾ ಎಂದು ಅಸಹನೆಯಿಂದ ತಿರುತಿರುಗಿ ನಮ್ಮತ್ತಲೇ ನೋಡುತ್ತಾ ತಮ್ಮ ತಮ್ಮಲ್ಲೇ ಒಂದರ ಮೇಲೊಂದು ಆರೋಪಿಸುತ್ತಾ ಪೊದೆಗಳಾಚೆ ಕಣ್ಮರೆಯಾದವು. (ಮುಂದುವರಿಯುವುದು)

Printed, Published and Owned by Manjunatha B.R. and Printed at PAPPAS PRINT HOUSE, BEHIND DISTRICT STADIUM, M.G.ROAD,VIDYANAGAR, HASSAN, KARNATAKA-573201 and published at No. 150, BANAVASE, SAKALESHPURA TALLUK, HASSAN DISTRICT, KARNATAKA-573201. Editor: MANJU BANAVASE. Ph: 8762954248